ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಬುಧವಾರ, ಡಿಸೆಂಬರ್ 06, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 204 RNI : 27369/75

50 1974 2023

janathavani@mac.com
www.janathavani.com
08192 254736 91642 99999

## ಗ್ರಂಥಾಲಯವೇ ವಿದ್ಯಾರ್ಥಿನಿಯರ ಕಡೆ ನಡೆದಾಗ..!



ದಾವಣಗೆರೆ, ಡಿ. 5 - ಗ್ರಂಥಾಲಯಕ್ಕೆ ವಿದ್ಯಾರ್ಥಿ - ವಿದ್ಯಾರ್ಥಿನಿಯರು ಬರುವುದು ಸಾಮಾನ್ಯ. ಆದರೆ, ನಗರದ ಎ.ವಿ.ಕೆ. ಮಹಿಳಾ ಕಾಲೇಜಿನಲ್ಲಿ ಗ್ರಂಥಾಲಯವನ್ನೇ ವಿದ್ಯಾರ್ಥಿನಿಯರ ಕಡೆ ತರಲಾಗಿತ್ತು!

ಮೊಬೈಲ್ ಹಾಗೂ ಸಾಮಾಜಿಕ ಜಾಲತಾಣದ ಈ ಕಾಲದಲ್ಲಿ, ಸೆಮಿಸ್ಟರ್ ಒತ್ತಡದ ಸಮಯದಲ್ಲಿ ವಿದ್ಯಾರ್ಥಿನಿಯರು ಪುಸ್ತಕ ಹಾಗೂ ಗ್ರಂಥಾಲಯ ಗಳ ಕಡೆಗಿನ ಆಸಕ್ತಿ ಕಳೆದುಕೊಳ್ಳುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ಎ.ವಿ.ಕೆ. ಕಾಲೇಜಿನಲ್ಲಿ 'ಅಭಿರುಚಿ ಇದು ಓದುಗರ ವೇದಿಕೆ' ಎಂಬ ಹೆಸರಿನ ಕಾರ್ಯಕ್ರಮದ ಮೂಲಕ ಗ್ರಂಥಾಲಯದಲ್ಲಿರುವ ವಿಶಿಷ್ಟ ಪುಸ್ತಕಗಳನ್ನು ವಿದ್ಯಾರ್ಥಿನಿಯರಿಗೆ ಪರಿಚಯಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾಲೇಜಿನಲ್ಲಿ ಕಳೆದ ವರ್ಷ 'ಪುಸ್ತಕದ ಕಡೆ ವಿದ್ಯಾರ್ಥಿನಿಯರ ನಡೆ' ಎಂಬ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಆದರೆ, ಅದು ನಿರೀಕ್ಷಿತ ರೀತಿಯಲ್ಲಿ ಫಲಕಾರಿಯಾಗಲಿಲ್ಲ. ಹೀಗಾಗಿ ಈ ಬಾರಿ ಗ್ರಂಥಾಲಯದ ಪುಸ್ತಕಗಳನ್ನು ಕಾಲೇಜಿನ ಆವರಣದಲ್ಲಿ ತಂದಿರಿಸಿ, ಗ್ರಂಥಾಲಯವನ್ನೇ ವಿದ್ಯಾರ್ಥಿನಿಯರ ಬಳಿ ತರಲಾಗಿತ್ತು.

ಕಾರ್ಯಕ್ರಮದಲ್ಲಿ ಮಾತನಾಡಿದ ಬಾಪೂಜಿ ಶಿಕ್ಷಣ ಸಂಸ್ಥೆಯ ನಿರ್ದೇಶಕ (ಶೈಕ್ಷಣಿಕ) ಡಾ. ಎಂ.ಜಿ. ಈಶ್ವರಪ್ಪ, 'ಪುಸ್ತಕಂ ಹಸ್ತ ಲಕ್ಷಣಂ' ಎಂಬ ಮಾತಿದೆ. ಕೈಯಲ್ಲಿ ಪುಸ್ತಕ ಇದ್ದರೆ ಅದೇ ಭೂಷಣ ಎಂಬುದು ಈ ಮಾತಿನ ಅರ್ಥ. ಜ್ಞಾನಕ್ಕಾಗಿ ಪುಸ್ತಕ ಬೇಕೇ ಬೇಕು ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಬಿ.ಐ.ಇ.ಟಿ. ಕಾಲೇಜಿನ ಗ್ರಂಥಪಾಲಕ ಕೆ.ವಿ. ಮಂಜುನಾಥ್, ಮೊಬೈಲ್‌ನಲ್ಲಿ ಪಿ.ಡಿ.ಎಫ್. ಇತ್ಯಾದಿಗಳಲ್ಲಿ ಓದಿದಾಗ ಹೆಚ್ಚು ಕಾಲ ನೆನಪಿನಲ್ಲಿ ಉಳಿಯುವುದಿಲ್ಲ. ಮುದ್ರಿತ ಪುಸ್ತಕವನ್ನು ಓದಿದಾಗ ಅದು ಹೆಚ್ಚಾಗಿ ಸ್ಮರಣೆಯಲ್ಲಿ ಉಳಿಯುತ್ತದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಎ.ವಿ.ಕೆ. ಕಾಲೇಜಿನ ಪ್ರಾಂಶುಪಾಲೆ ಪ್ರೊ. ಕಮಲ ಸೊಪ್ಪಿನ ಮಾತನಾಡಿ, ಕಾಲೇಜು ಶಿಕ್ಷಣವಷ್ಟೇ ಅಲ್ಲದೇ (2ನೇ ಪುಟಕ್ಕೆ)

### ಮೊಬೈಲ್, ಸೆಮಿಸ್ಟರ್ ಶಿಕ್ಷಣ: ಪುಸ್ತಕ ದೂರ

ದಶಕಗಳ ಹಿಂದೆ ಶಿಕ್ಷಣ ಹಾಗೂ ಪುಸ್ತಕ ಒಂದೇ ನಾಣ್ಯದ ಎರಡು ಮುಖಗಳಾಗಿದ್ದವು. ಪುಸ್ತಕಗಳಿಗಾಗಿ ವಿದ್ಯಾರ್ಥಿಗಳು ಗ್ರಂಥಾಲಯದಲ್ಲಿ ಪರದಾಡುವ ಪರಿಸ್ಥಿತಿ ಇತ್ತು. ಆದರೆ, ಬದಲಾದ ಕಾಲದಲ್ಲಿ ವಿದ್ಯಾರ್ಥಿಗಳು ಗ್ರಂಥಾಲಯ ಹಾಗೂ ಪುಸ್ತಕಗಳಿಂದ ದೂರವಾಗುತ್ತಿದ್ದಾರೆ.

ಸೆಮಿಸ್ಟರ್ ಶಿಕ್ಷಣ ಪದ್ಧತಿಯಿಂದಾಗಿ ನಮ್ಮ ಮೇಲೆ ಹೆಚ್ಚಿನ ಒತ್ತಡವಾಗಿದೆ. ಕಾಲೇಜು ಆರಂಭದ ಒಂದೆರಡು ತಿಂಗಳಾಗುವಷ್ಟರಲ್ಲಿ ಪರೀಕ್ಷಾ ಜ್ವರ ಏರಿರುತ್ತದೆ. ಹೀಗಾಗಿ ಪುಸ್ತಕಗಳನ್ನು ಓದುವುದು ಕಡಿಮೆಯಾಗಿದೆ ಎಂದು ಬಿ.ಎ. ಪ್ರಥಮ ವರ್ಷದ ವಿದ್ಯಾರ್ಥಿನಿ ಎಸ್.ಜಿ. ಪಲ್ಲವಿ ತಿಳಿಸಿದರು.

ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಿಂದ ಹಲವಾರು ಸೆಮಿನಾರ್, ಅಸೈನ್‌ಮೆಂಟ್, ಪ್ರಾತ್ಯಕ್ಷಿಗೆಗಳಲ್ಲಿ ಪಾಲ್ಗೊಳ್ಳಬೇಕಿದೆ. ಇದರಿಂದಾಗಿ ಪುಸ್ತಕಗಳಿಗೆ ಹೆಚ್ಚು ಸಮಯ ಸಿಗುತ್ತಿಲ್ಲ ಎಂದು ವಿದ್ಯಾರ್ಥಿನಿ ಅಕ್ಷತ ಹೇಳಿದರು.

ಆದರೆ, ಪುಸ್ತಕಗಳಿಂದ ಆಳವಾದ ಜ್ಞಾನ ಸಿಗುತ್ತದೆ. ಹೆಚ್ಚು ಮಾಹಿತಿ ಸಿಗುವುದರಿಂದ ಪರೀಕ್ಷೆಗೆ ಅನುಕೂಲವಾಗುತ್ತದೆ. ಕನಿಷ್ಠ ದಿನಕ್ಕೆ ಒಂದು ಗಂಟೆಯಾದರೂ ಗ್ರಂಥಾಲಯದ ಬಳಕೆಯಿಂದ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ ಎಂದು ಬಿ.ಎ. ತೃತೀಯ ವರ್ಷದ ವಿದ್ಯಾರ್ಥಿನಿ ಕೆ.ಎಂ. ಲಕ್ಷ್ಮಿ ಅಭಿಪ್ರಾಯ ಪಟ್ಟರು.

### ಗ್ರಂಥ ಹಿಡಿದವರಿಗೆ ಬಹುಮಾನ

ಅತಿ ಹೆಚ್ಚು ಗ್ರಂಥಾಲಯ ಬಳಸಿಕೊಂಡ ವಿದ್ಯಾರ್ಥಿನಿಯರಾದ ಕೆ.ಎಂ. ಲಕ್ಷ್ಮಿ, ಎಸ್.ಬಿ. ಐಶ್ವರ್ಯ ಹಾಗೂ ಮೆಹಕ್ ಖಾನುಂ ಹಾಗೂ ಬೋಧಕರಾದ ಆರ್.ಸಿ. ಗೌಡ, ಮೊಹಮ್ಮದ್ ರಜಾವುಲ್ಲಾ ಖಾನ್ ಹಾಗೂ ರವಿ ಕುಮಾರ್ ಅವರಿಗೆ ಇದೇ ವೇಳೆ ಬಹುಮಾನ ನೀಡಲಾಯಿತು. ಮುಂದಿನ ವರ್ಷ ಇನ್ನೂ ಹೆಚ್ಚಿನ ವಿದ್ಯಾರ್ಥಿನಿಯರಿಗೆ ಬಹುಮಾನ ನೀಡಬೇಕೆಂದು ಕಾಲೇಜಿನ ಪ್ರಾಂಶುಪಾಲೆ ಪ್ರೊ. ಕಮಲ ಸೊಪ್ಪಿನ ಸೂಚನೆಯನ್ನೂ ನೀಡಿದರು.

# ಅಲ್ಪಸಂಖ್ಯಾತರಿಗೆ 5 ಸಾವಿರ ಕೋಟಿ

## ಅಲ್ಪಸಂಖ್ಯಾತರೂ ಸೇರಿ ಎಲ್ಲರಿಗೂ ರಕ್ಷಣೆ : ಸಿದ್ದರಾಮಯ್ಯ ಭರವಸೆ



ಬೆಳಗಾವಿ, ಡಿ. 5 - ಅಲ್ಪಸಂಖ್ಯಾತರು ಸೇರಿದಂತೆ, ಎಲ್ಲರಿಗೂ ರಕ್ಷಣೆ ನೀಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಭರವಸೆ ನೀಡಿದ್ದಾರೆ.

ರಾಷ್ಟ್ರದ ಸಂಪತ್ತಿನಲ್ಲಿ ಅಲ್ಪಸಂಖ್ಯಾತರಿಗೆ ಹಕ್ಕು ನೀಡುವ ಕುರಿತು ನಿನ್ನೆ ನೀಡಿದ ಹೇಳಿಕೆ ಬೆನ್ನಲ್ಲೇ ಈ ಸ್ಪಷ್ಟೀಕರಣ ನೀಡಿದ್ದಾರೆ.

ಮುಖ್ಯಮಂತ್ರಿ ಅವರ ಹೇಳಿಕೆಗೆ ಬಿಜೆಪಿ ನಾಯಕರು ತೀವ್ರ ವಿರೋಧ ವ್ಯಕ್ತಪಡಿಸಿ, ಹಿಂದೂಗಳನ್ನು ಎರಡನೇ ಪಂಕ್ತಿಗೆ ಸೇರಿಸಲು ಸರ್ಕಾರ ಹೊರಟಿದೆ ಎಂದು ಖಂಡಿಸಿದ್ದಾರೆ.

ಇದರ ಬೆನ್ನಲ್ಲೇ ಮುಖ್ಯಮಂತ್ರಿ ಅವರು ಸುವರ್ಣ ಸೌಧದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿ, ಅಲ್ಪಸಂಖ್ಯಾತರಿಗೆ 4 ರಿಂದ 5 ಸಾವಿರ ಕೋಟಿ ರೂ.ಗಳನ್ನು ಬಜೆಟ್‌ನಲ್ಲಿ ಮೀಸಲಿಡುವುದಕ್ಕೆ ಈಗಲೂ ಸಿದ್ಧನಿದ್ದೇನೆ. ಇದೇನು ಓಲೈಕೆ ರಾಜಕಾರಣ ಅಲ್ಲ. ಇದರಲ್ಲಿ ಏನು ತಪ್ಪಿದೆ? ಸಮಾಜದ ಎಲ್ಲರಿಗೂ ಸಮಾನ ಸವಲತ್ತು ಕಲ್ಪಿಸುವುದಾಗಿ ತಿಳಿಸಿದರು.

ಮುಖ್ಯಮಂತ್ರಿ ಹೇಳಿಕೆ ಬೆನ್ನಲ್ಲೇ ಪ್ರತಿಪಕ್ಷದ ನಾಯಕ ಆರ್. ಅಶೋಕ್, ಮುಖ್ಯಮಂತ್ರಿ ಅವರಿಗೆ ಟಿಪ್ಪು ಎಂದರೆ ಬಹಳ ಪ್ರೀತಿ, ಅವರು ಕೇವಲ ಒಂದು ಸಮುದಾಯವನ್ನು ಓಲೈಕೆ ಮಾಡುವುದು ಸರಿಯಲ್ಲ ಎಂದು ಹೇಳಿದರು. ಹಿಂದೂಗಳನ್ನು ಎರಡನೇ ದರ್ಜೆ ಪ್ರಜೆಗಳಾಗಿ ನೋಡುತ್ತಿದ್ದಾರೆ, ಅವರು ನಿನ್ನೆ ಮತ್ತು ಇಂದು ನೀಡಿರುವ ಹೇಳಿಕೆಗಳು ದೇಶ ಮತ್ತು ರಾಜ್ಯದ ಹಿತದೃಷ್ಟಿಯಿಂದ ಒಳ್ಳೆಯ ಹೇಳಿಕೆಯಲ್ಲ. ಈ ಹೇಳಿಕೆಯನ್ನು ನಾನು ಖಂಡಿಸುತ್ತೇನೆ ಎಂದರು.

**ಮುಖ್ಯಮಂತ್ರಿ ಹೇಳಿಕೆಗೆ ಬಿಜೆಪಿ ನಾಯಕರು ತೀವ್ರ ವಿರೋಧ**

**ಹಿಂದೂಗಳನ್ನು ಎರಡನೇ ಪಂಕ್ತಿಗೆ ಸೇರಿಸಲು ಸರ್ಕಾರ ಹೊರಟಿದೆ ಎಂದು ಖಂಡನೆ**

ಟಿಪ್ಪು ಜಯಂತಿ, ಶಾದಿಭಾಗ್ಯ, ಮುಸ್ಲಿಂ ಸಮುದಾಯದವರ ವಿವಾಹಕ್ಕೆ ಧನಸಹಾಯ ಸೇರಿದಂತೆ ಆ ಸಮುದಾಯಕ್ಕೆ ಹತ್ತು ಹಲವು ಕಾರ್ಯಕ್ರಮ ನೀಡಿರುವ ಸಿದ್ದರಾಮಯ್ಯ, ಈಗ ಮತ್ತೆ ಹೊಸ ಕಾರ್ಯಕ್ರಮಗಳನ್ನು ನೀಡಲು ಹೊರಟಿರುವುದಕ್ಕೆ ನಮ್ಮ ವಿರೋಧವಿದೆ ಎಂದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅಲ್ಪಸಂಖ್ಯಾತರಿಗೆ ವಿಶೇಷ ಹಕ್ಕು ಕೊಡುವ ಮೂಲಕ ಮುಖ್ಯಮಂತ್ರಿ ಅವರು ತುಷ್ಟೀಕರಣದ ರಾಜಕಾರಣ ಮತ್ತು ಮತ ಬ್ಯಾಂಕ್ ರಾಜಕಾರಣ ಮಾಡುತ್ತಿದ್ದಾರೆ ಎಂದರು. ಅಲ್ಪಸಂಖ್ಯಾತ ಸಮುದಾಯಕ್ಕೆ ಅನೇಕ ಮಾದರಿಯಲ್ಲಿ ವಿವಿಧ ಸವಲತ್ತುಗಳು ದೊರೆಯುತ್ತಿವೆ, ಇಷ್ಟಾಗಿಯೂ ಇತರೆ ಎಲ್ಲಾ (2ನೇ ಪುಟಕ್ಕೆ)

## ಅಸಂಘಟಿತ ಕಾರ್ಮಿಕರಿಗೆ ವಿಶೇಷ ಸಾಮಾಜಿಕ ಭದ್ರತೆ : ಸಚಿವ ಲಾಡ್

ಬೆಳಗಾವಿ, ಡಿ. 5 - ರಾಜ್ಯದಲ್ಲಿನ ನೇಕಾರರು ಹಾಗೂ ಟೈಲರಿಂಗ್ ಸೇರಿದಂತೆ ಅಸಂಘಟಿತ ವಲಯದ ಹಲವು ಕಾರ್ಮಿಕರಿಗೆ ವಿಶೇಷ ಸಾಮಾಜಿಕ ಭದ್ರತಾ ಯೋಜನೆಗಳನ್ನು ಜಾರಿ ಮಾಡುವುದಾಗಿ ಕಾರ್ಮಿಕ ಸಚಿವ ಸಂತೋಷ್ ಎಸ್. ಲಾಡ್ ವಿಧಾನಸಭೆಯಲ್ಲಿ ಭರವಸೆ ನೀಡಿದರು.

ಪ್ರಶ್ನೋತ್ತರ ವೇಳೆಯಲ್ಲಿ ಸಿದ್ದು ಸವದಿ ಹಾಗೂ ಕಾಪು ಗುರ್ಮೆ ಸುರೇಶ್ ಶೆಟ್ಟಿ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ರಾಜ್ಯದಲ್ಲಿ ಪ್ರತಿ ನಿರ್ಮಾಣ ಕಾಮಗಾರಿಗೆ ಶೇ.1 ರಷ್ಟು ಸೆಸ್ ವಿಧಿಸಲಾಗುತ್ತಿದೆ. ಇದರಡಿ ಸಂಗ್ರಹವಾದ ಹಣದಲ್ಲಿ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯು, ಹಲವು ಸಾಮಾಜಿಕ ಭದ್ರತಾ ಯೋಜನೆಗಳನ್ನು ಕಟ್ಟಡ ಕಾರ್ಮಿಕರಿಗೆ ಜಾರಿ ಮಾಡಿದೆ ಎಂದರು.

ಈ ಯೋಜನೆಗಳನ್ನು ನೇಕಾರರು ಹಾಗೂ ಟೈಲರಿಂಗ್ ಸೇರಿದಂತೆ ಇತರೆ ಯಾವುದೇ ಅಸಂಘಟಿತ ಕಾರ್ಮಿಕರಿಗೆ ವಿಸ್ತರಿಸಲು ಬರುವುದಿಲ್ಲ. ರಾಜ್ಯದಲ್ಲಿ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ಇದ್ದು, ಮಂಡಳಿಯು ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯಡಿ ಹಮಾಲರು, ಮನೆಗೆಲಸದವರು, ಚಿಂದಿ (2ನೇ ಪುಟಕ್ಕೆ)

## 13 ಅಧಿಕಾರಿಗಳ ಮೇಲೆ ಲೋಕಾಯುಕ್ತ ದಾಳಿ

ಬೆಳಗಾವಿ, ಡಿ. 5 - ಬಿಜೆಪಿ ರಾಜ್ಯಾಧ್ಯಕ್ಷ ಬಿ. ವೈ.ವಿಜಯೇಂದ್ರ, ಅವರ ಪತ್ನಿಯ ಸಹೋದರ ಡಾ. ಪ್ರಭುಲಿಂಗ ಮಾನಕರ ಸೇರಿದಂತೆ, ಭ್ರಷ್ಟ ಅಧಿಕಾರಿಗಳ ವಿರುದ್ಧ ಲೋಕಾಯುಕ್ತರು ದಾಳಿ ನಡೆಸಿ ಕೋಟ್ಯಂತರ ರೂ. ನಗದು ಹಾಗೂ ಆಸ್ತಿ-ಪಾಸ್ತಿಗಳನ್ನು ವಶಪಡಿಸಿಕೊಂಡಿದ್ದಾರೆ.

ಇಂದು ಬೆಳ್ಳಂ ಬೆಳಗ್ಗೆ ರಾಜ್ಯದ 13 ಅಧಿಕಾರಿಗಳಿಗೆ ಸೇರಿದ 63 ಸ್ಥಳಗಳ ಮೇಲೆ ಲೊಕಾಯುಕ್ತ ಪೊಲೀಸರು ದಾಳಿ ನಡೆಸಿದ್ದಾರೆ. ಅಕ್ರಮ ಆಸ್ತಿ ಗಳಿಕೆ, ಲಂಚಕ್ಕೆ ಬೇಡಿಕೆ ದೂರುಗಳು ಬಂದ ಹಿನ್ನೆಲೆಯಲ್ಲಿ ಈ ದಾಳಿ ಮಾಡಿದ್ದಾರೆ.

ಯಾದಗಿರಿಯ ಡಿಎಚ್‌ಓ ಆಗಿರುವ ಪ್ರಭುಲಿಂಗ ಅವರ ಕಲುಬುರಗಿಯ ಮನೆ, ತೋಟ, (2ನೇ ಪುಟಕ್ಕೆ)

## ಹೈಕೋರ್ಟ್ ಕಲಾಪಗಳ ವಿಡಿಯೋ ಕಾನ್ಫರೆನ್ಸ್‌ಗೆ ತಡೆ

ಬೆಂಗಳೂರು, ಡಿ. 5 – ಬೆಂಗಳೂರಿನ ಪ್ರಧಾನ ನ್ಯಾಯಾಲಯ ಹಾಗೂ ಧಾರವಾಡ ಮತ್ತು ಕಲಬುರಗಿಗಳ ಸರ್ಕಿಟ್ ಪೀಠಗಳ ಕಲಾಪಗಳ ವಿಡಿಯೋ ಕಾನ್ಫರೆನ್ಸ್ ಸೌಲಭ್ಯವನ್ನು ಕರ್ನಾಟಕ ಹೈಕೋರ್ಟ್ ತಡೆದಿದೆ.

ಕಲಾಪಗಳನ್ನು ಯೂಟ್ಯೂಬ್ ಮೂಲಕ ನೇರ ಪ್ರಸಾರ ಮಾಡುವುದಕ್ಕೂ ತಡೆ ಹಾಕಲಾಗಿದೆ. ಕು ಚೇಷ್ಟೆ ಹಾಗೂ ಅಭೂತಪೂರ್ವ ಪರಿಸ್ಥಿತಿಯ ಕಾರಣ ದಿಂದ ಈ ಕ್ರಮ (5ನೇ ಪುಟಕ್ಕೆ)

## ತೆಲಂಗಾಣ ಸಿಎಂ ಆಗಿ ರೇವಂತ್ ರೆಡ್ಡಿ ಆಯ್ಕೆ



ನವದೆಹಲಿ ಡಿ. 5 – ತೆಲಂಗಾಣದ ಮುಂದಿನ ಮುಖ್ಯಮಂತ್ರಿಯಾಗಿ ಕಾಂಗ್ರೆಸ್ ರಾಜ್ಯಾಧ್ಯಕ್ಷ ಎ. ರೇವಂತ್ ರೆಡ್ಡಿ ಅವರನ್ನು ಆಯ್ಕೆ ಮಾಡಲಾಗಿದೆ.

ಎ.ಐ.ಸಿ.ಸಿ. ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು ಈ ಘೋಷಣೆ ಮಾಡಿದ್ದಾರೆ. ಡಿ.7ರಂದು ಹೈದರಾಬಾದ್‌ನಲ್ಲಿ ಪ್ರಮಾಣ ವಚನ ಸ್ವೀಕಾರ ಸಮಾರಂಭ ನಡೆಯಲಿದೆ.

## ಈ ಬಾರಿ ಚಳಿ ತೀವ್ರತೆ ಕಡಿಮೆ

ನವದೆಹಲಿ, ಡಿ. 5 - ಈ ವರ್ಷದ ಚಳಿಗಾಲದಲ್ಲಿ ಮೇಲ್ಮೈ ತಾಪಮಾನ ವಾಡಿಕೆಗಿಂತ ಹೆಚ್ಚಾಗಿರುವ ಸಾಧ್ಯತೆ ಶೇ.95ರಷ್ಟಿದೆ ಎಂದು ಸಂಶೋಧಕರು ಹೇಳಿದ್ದಾರೆ. ಚೀನಾದ ಇನ್‌ಸ್ಟಿಟ್ಯೂಟ್ ಆಫ್ ಅಟ್ಮಾಸ್ಪಿರಿಕ್ ಫಿಸಿಕ್ಸ್ ಸಂಶೋಧಕರು ವರದಿಯೊಂದನ್ನು ರೂಪಿಸಿದ್ದು, ಯುರೇಷಿಯ ಹಾಗೂ ಅಮೆರಿಕಗಳಲ್ಲಿ ಚಳಿಗಾಲದ ತಾಪಮಾನ ವಾಡಿಕೆಗಿಂತ ಹೆಚ್ಚಾಗಿರಲಿದೆ ಎಂದು ಹೇಳಿದ್ದಾರೆ.

ಉತ್ತರ ಗೋಳದಲ್ಲಿ ಚಳಿಗಾಲದ ವೇಳೆ ತಾಪಮಾನ ಹೆಚ್ಚಳಕ್ಕೆ ಕಾರಣವಾಗುವ ಎಲ್ ನಿನೋ ಕಂಡು ಬರಲಿದೆ ಎಂದೂ ಸಂಶೋಧಕರು ಹೇಳಿದ್ದಾರೆ.

## ವಿವಾದಾತ್ಮಕ ಹೇಳಿಕೆ : ಪಕ್ಷಭೇದ ಮರೆತು ಖಂಡನೆ

ನವದೆಹಲಿ, ಡಿ. 5 – ಹಿಂದಿ ಭಾಷಿಗರ ರಾಜ್ಯಗಳನ್ನು 'ಗೋಮೂತ್ರ ರಾಜ್ಯಗಳು' ಎಂದು ಹೀಗಳೆಯುವ ಮೂಲಕ ಡಿ.ಎಂ.ಕೆ. ಲೋಕಸಭಾ ಸದಸ್ಯ ಸೆಂಥಿಲ್ ಕುಮಾರ್, ವಿವಾದಕ್ಕೆ ಕಾರಣವಾಗಿದ್ದರೆ.

ಅವರ ಈ ಹೇಳಿಕೆಯನ್ನು ಬಿಜೆಪಿ ಹಾಗೂ ಕಾಂಗ್ರೆಸ್‌ಗಳೆರಡೂ ಖಂಡಿಸಿವೆ. ಡಿಎಂಕೆ ಸಹ ವಿವಾದಿತ ಹೇಳಿಕೆ ನೀಡಿದ ಸಂಸದನನ್ನು ತರಾಟೆಗೆ ತೆಗೆದುಕೊಂಡಿದೆ.

ಲೋಕಸಭೆಯಲ್ಲಿ ಜಮ್ಮು ಮತ್ತು ಕಾಶ್ಮೀರ ಪುನರ್ವಿಂಗಡಣಾ ತಿದ್ದುಪಡಿ (2ನೇ ಪುಟಕ್ಕೆ)

# ಹೋಟೆಲ್ ಮದ್ಯದ ಪರವಾನಗಿ ನಿಯಮ ಬದಲಾವಣೆ

ಬೆಳಗಾವಿ, ಡಿ. 6 – ಹೋಟೆಲ್ ಹಾಗೂ ವಸತಿಗೃಹಗಳಿಗೆ ನೀಡಲಾಗುವ ಮದ್ಯದ ಪರವಾನಗಿ ನಿಯಮ ಬದಲಿಸಲಾಗುವುದು ಎಂದು ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ತಿಳಿಸಿದರು.

ಪರವಾನಗಿ ನೀಡುವಾಗ ದೊಡ್ಡ ಪ್ರಮಾಣದಲ್ಲಿ ಅವ್ಯವಹಾರ ನಡೆದಿದೆ ಎಂದು ಆಡಳಿತಾರೂಢ ಕಾಂಗ್ರೆಸ್ ಶಾಸಕರು ಆರೋಪಿಸಿದ ನಂತರ ಸಚಿವರು ಈ ಘೋಷಣೆ ಮಾಡಿದ್ದಾರೆ.

ಕೋಲಾರದಲ್ಲಿ ಪರವಾನಗಿ ನೀಡುವಾಗ ಶೇ.70ರಷ್ಟು ನಿಯಮಗಳನ್ನು ಪಾಲಿಸಿಲ್ಲ. ಕೇವಲ 9 x 7 ಅಡಿ ವಾಹನ ನಿಲುಗಡೆ ಇರುವ ಹೋಟೆಲ್‌ಗಳಿಗೂ ಮದ್ಯದ ಪರವಾನಗಿ ನೀಡಲಾಗಿದೆ ಎಂದು ಬಂಗಾರಪೇಟೆ ಶಾಸಕ ಎಸ್.ಎನ್. ನಾರಾಯಣ ಸ್ವಾಮಿ ಆರೋಪಿಸಿದರು.

ಅಬಕಾರಿ ಅಧೀಕ್ಷಕ ರಂಗಪ್ಪ ಅವರು ಪರವಾನಗಿ ನೀಡುವಲ್ಲಿ ನಿಯಮಗಳನ್ನು ಉಲ್ಲಂಘಿಸಿದ್ದಾರೆ. ಅಲ್ಲದೇ, ಪರವಾನಗಿ ನೀಡುವ ಪ್ರತಿ ವಹಿವಾಟಿನಲ್ಲಿ ಪಾಲುದಾರರಾಗಿದ್ದಾರೆ ಎಂದೂ ಹೇಳಿದರು.

ಪರವಾನಗಿ ನೀಡುವಲ್ಲಿ 1,000 ಕೋಟಿ ರೂ.ಗಳ ಹಗರಣವಾಗಿದೆ ಎಂದು ಸಾಗರ ಶಾಸಕ ಗೋಪಾಲ ಕೃಷ್ಣ ಬೇಳೂರು ಆರೋಪಿಸಿದರು. ಪರವಾನಗಿ ನೀಡುವುದು ದೊಡ್ಡ ದಂಧೆಯಾಗಿದೆ ಎಂದು ಕೋಲಾರ ಜಿಲ್ಲೆಯ ಮಾಲೂರು ಶಾಸಕ ಕೆ.ವೈ. ನಂಜೇಗೌಡ ಹೇಳಿದರು.

ಬಿಜೆಪಿ ಅಧಿಕಾರದಲ್ಲಿದ್ದ ಸಮಯದಲ್ಲಿ ಈ ಅವ್ಯವಹಾರಗಳಾಗಿವೆ ಎಂದು ಕೆಲ ಕಾಂಗ್ರೆಸ್ (2ನೇ ಪುಟಕ್ಕೆ)

## ಬಿಜೆಪಿ ನಾಯಕನ ಮೇಲೆ ಹಲ್ಲೆ : ಪರಿಷತ್ ಸದಸ್ಯ ಹಟ್ಟಿಹೊಳಿ ವಿರುದ್ಧ ಎಫ್.ಐ.ಆರ್.

ಬೆಳಗಾವಿ, ಡಿ. 5 - ಬಿಜೆಪಿ ನಾಯಕ ಪೃಥ್ವಿಸಿಂಗ್ ಮೇಲೆ ಹಲ್ಲೆ ಮಾಡಿದ ಆರೋಪದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪರಿಷತ್ ಸದಸ್ಯ ಚನ್ನರಾಜ್ ಹಟ್ಟಿಹೊಳಿ ವಿರುದ್ಧ ಎಫ್ಐಆರ್ ದಾಖಲಿಸಲಾಗಿದೆ. ಬಿಜೆಪಿ ನಾಯಕ ಪೃಥ್ವಿಸಿಂಗ್ ಅವರ ಮೇಲೆ ಸೋಮವಾರ ಸಂಜೆ ಮಾರಣಾಂತಿಕ ಹಲ್ಲೆ ನಡೆದಿತ್ತು. ಆರೋಪಿ ಚನ್ನರಾಜ್ ಹಟ್ಟಿಹೊಳಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರ ಸಹೋದರ.

ಘಟನೆಗೂ ತಮಗೂ ಯಾವುದೇ ಸಂಬಂಧವಿಲ್ಲ ಎಂದು ಸಚಿವೆ ಹೆಬ್ಬಾಳ್ಕರ್ ಹಾಗೂ ಸಹೋದರ ಹೇಳಿದ್ದಾರೆ. ಪೃಥ್ವಿ ಸಿಂಗ್ ಅವರ ಮೇಲೆ ಬೆಳಗಾವಿಯ ಜಯನಗರ ಹಿಂಡಲಗ ನಿವಾಸದ ಬಳಿ ಮಾರಣಾಂತಿಕ ಹಲ್ಲೆ ನಡೆದಿತ್ತು. ಸಿಂಗ್ ಅವರು ಬಿಜೆಪಿ ಶಾಸಕ ರಮೇಶ್ ಜಾರಕಿಹೊಳಿ ನಿಕಟವರ್ತಿ.

## ಯುಕೋ ಬ್ಯಾಂಕ್ 820 ಕೋಟಿ ರೂ. ವಹಿವಾಟು ಪ್ರಕರಣ

ನವದೆಹಲಿ, ಡಿ. 5 – ಯುಕೋ ಬ್ಯಾಂಕ್‌ನಲ್ಲಿ ಶಂಕಾಸ್ಪದವಾಗಿ 820 ಕೋಟಿ ರೂ.ಗಳ ಐ.ಎಂ.ಪಿ.ಎಸ್. ವರ್ಗಾವಣೆ ನಡೆದ ಬಗ್ಗೆ ಸಿ.ಬಿ.ಐ. ಕ್ರಮ ತೆಗೆದುಕೊಂಡಿದ್ದು ಎಫ್.ಐ.ಆರ್. ದಾಖಲಿಸಿದೆ. ಹಲವು ನಗರಗಳ 13 ತಾಣಗಳಲ್ಲಿ ಶೋಧ ನಡೆಸಿದೆ.

ಕೊಲ್ಕೊತಾ ಹಾಗೂ ಮಂಗಳೂರು ಸೇರಿದಂತೆ ಹಲವೆಡೆ ಸೋಮವಾರ ತಡರಾತ್ರಿಯವರೆಗೂ ಶೋಧ ಕಾರ್ಯಾಚರಣೆ ನಡೆಸಲಾಗಿತ್ತು.

ಯುಕೋ ಬ್ಯಾಂಕ್‌ನ ಇಬ್ಬರು ಇಂಜಿನಿಯರ್‌ಗಳು ಹಾಗೂ ಅನಾಮಿಕರ ವಿರುದ್ಧ ಈ ಬಗ್ಗೆ ಎಫ್.ಐ.ಆರ್. ದಾಖಲಿಸಲಾಗಿದೆ.\

## ಡೀಪ್‌ಫೇಕ್ ಪೋರ್ಜರಿಗೆ ಸಮ

ನವದೆಹಲಿ, ಡಿ. 5- ಡೀಪ್‌ಫೇಕ್ ವಿಷಯಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಜಾಲತಾಣ ಕಂಪನಿಗಳು ತೆಗೆದುಕೊಂಡಿರುವ ಕ್ರಮಗಳ ಕುರಿತು ಕೇಂದ್ರ ಸರ್ಕಾರ ಪರಿಶೀಲನಾ ಸಭೆ ನಡೆಸಿದೆ.

ಈಗಿರುವ ಕಾಯ್ದೆಗಳ ಅನ್ವಯವೇ ಡೀಪ್‌ಫೇಕ್ ವಿರುದ್ಧ ಕ್ರಮ ಸಾಧ್ಯವಿದೆ ಎಂದು ಸಾಮಾಜಿಕ ಜಾಲತಾಣ ಕಂಪನಿಗಳು ಸರ್ಕಾರಕ್ಕೆ ತಿಳಿಸಿವೆ ಎಂದು ಮೂಲಗಳು ತಿಳಿಸಿವೆ.

**ಈಗಿರುವ ಸಿ.ಆರ್.ಪಿ.ಸಿ. ಸೆಕ್ಷನ್‌ಗಳ ಅನ್ವಯವೇ ಕ್ರಮ**

ಈಗಿರುವ ಕಾನೂನುಗಳ ಅನ್ವಯವೇ ಡೀಪ್‌ಫೇಕ್ ಪೋರ್ಜರಿ ವ್ಯಾಪ್ತಿಗೆ ಬರುತ್ತದೆ. ಇದೇ ರೀತಿ ಇತರೆ ಕೆಲ ಹಾನಿಗಳೂ ಸಹ ಐ.ಪಿ.ಸಿ. ಸೆಕ್ಷನ್ ಒಳಗೇ ಬರುತ್ತದೆ ಎಂದು ಸಭೆಯಲ್ಲಿ ಅಭಿಪ್ರಾಯ ಪಡಲಾಗಿದೆ.

ನವೆಂಬರ್ 24ರಂದು ಕೇಂದ್ರ ಐ.ಟಿ. ಹಾಗೂ ಎಲೆಕ್ಟ್ರಾನಿಕ್ಸ್ ಸಚಿವ ರಾಜೀವ್ ಚಂದ್ರಶೇಖರ್ ಅವರು ಸಾಮಾಜಿಕ ಜಾಲತಾಣ ಕಂಪನಿಗಳ ಜೊತೆ ಸಭೆ ನಡೆಸಿ, ಡೀಪ್‌ಫೇಕ್ ವಿಷಯದ ಕುರಿತು ಏಳು ದಿನಗಳಲ್ಲಿ ನಿರ್ಣಾಯಕ ಕ್ರಮ ತೆಗೆದುಕೊಳ್ಳುವಂತೆ ತಿಳಿಸಿದ್ದರು.

ಅದರಂತೆ ಮಂಗಳವಾರ ಸಭೆ ನಡೆಸಲಾಗಿದ್ದು, ಕಳೆದ ಸಭೆಯಲ್ಲಿ ತೆಗೆದುಕೊಳ್ಳಲಾದ ನಿರ್ಣಯಗಳಲ್ಲಿ ಆಗಿರುವ ಪ್ರಗತಿಯ ಬಗ್ಗೆ ಪರಿಶೀಲಿಸಲಾಗಿದೆ. ಕೆಲ ವೇದಿಕೆಗಳು ನಿಯಮಗಳನ್ನು ಪಾಲಿಸಿದ್ದರೆ, ಇನ್ನು ಕೆಲವು ನಿಧಾನ ಗತಿಯಲ್ಲಿವೆ. ಈ ಕಂಪನಿಗಳು ಕ್ರಮ ತೆಗೆದುಕೊಳ್ಳಲು ಹೆಚ್ಚುವರಿ ಸಮಯ ನೀಡಲಾಗಿದೆ. ಬಳಕೆದಾರರಿಗೆ ಯಾವುದೇ (5ನೇ ಪುಟಕ್ಕೆ)

## 25 ಸಾವಿರ ಸ್ಮಾರಕಗಳ ರಕ್ಷಣೆ

**ಪ್ರವಾಸೋದ್ಯಮ ಸಚಿವ ಹೆಚ್. ಕೆ.ಪಾಟೀಲ್**

ಬೆಳಗಾವಿ, ಡಿ. 5 - ಖಾಸಗಿ ಸಹಭಾಗಿತ್ವದಲ್ಲಿ ರಾಜ್ಯದ 25 ಸಾವಿರಕ್ಕೂ ಹೆಚ್ಚಿನ ಸ್ಮಾರಕಗಳ ರಕ್ಷಣೆಗೆ ಸರ್ಕಾರ ಮುಂದಾಗಿದೆ ಎಂದು ಪ್ರವಾಸೋದ್ಯಮ ಸಚಿವ ಹೆಚ್.ಕೆ. ಪಾಟೀಲ್ ವಿಧಾನಸಭೆಯಲ್ಲಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಉಮಾನಾಥ ಕೋಟ್ಯಾನ್ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಸ್ಮಾರಕಗಳ ದತ್ತು ತೆಗೆದುಕೊಳ್ಳುವ ಯೋಜನೆ ಜಾರಿಯಲ್ಲಿದೆ. ಪ್ರವಾಸಿ ತಾಣಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗುವುದು ಎಂದರು.

ಇದೇ ಸಂದರ್ಭದಲ್ಲಿ ಪಿ.ಎಂ. ನರೇಂದ್ರಸ್ವಾಮಿ ಅವರ ಮತ್ತೊಂದು ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಯಲ್ಲಮ್ಮನ ಗುಡ್ಡ, ಮಧುಗಿರಿ, ಅಂಜನಾದ್ರಿ, ನಂದಿಬೆಟ್ಟ ಹಾಗೂ ಗಗನಚುಕ್ಕಿಯಲ್ಲಿ ಕೇಬಲ್ ಕಾರ್ ಪ್ರಾರಂಭಿಸುವುದಕ್ಕೆ ಪರಿಶೀಲನೆ ಕಾರ್ಯ ನಡೆಸಲಾಗುತ್ತಿದೆ ಎಂದರು. 2023-24ನೇ ಸಾಲಿನ ಆಯವ್ಯಯದಲ್ಲಿ ಪ್ರವಾಸೋದ್ಯಮ (5ನೇ ಪುಟಕ್ಕೆ)

## ಅರಣ್ಯದಲ್ಲೇ ಆನೆಗಳಿಗೆ ಮೇವು

**ನಾಡಿಗೆ ವಲಸೆ ತಡೆಯಲು ಖಂಡ್ರೆ ಸೂಚನೆ**

ಬೆಳಗಾವಿ, ಡಿ. 5 - ನೀರು, ಮೇವನ್ನು ಅರಣ್ಯದಲ್ಲೇ ಸಮರ್ಪಕವಾಗಿ ಒದಗಿಸುವ ಮೂಲಕ ಆನೆಗಳು ನಾಡಿಗೆ ವಲಸೆ ಬರುವುದನ್ನು ತಡೆಯುವಂತೆ ಸಹೋದ್ಯೋಗಿಗಳೇ ಅರಣ್ಯ ಸಚಿವ ಈಶ್ವರ ಖಂಡ್ರೆಗೆ ಕಿವಿಮಾತು ಹೇಳಿದ್ದಾರೆ.

ದಸರಾ ಅಂಬಾರಿ ಹೊರುವ ಅರ್ಜುನ ಆನೆ ಕಾಳಗದಲ್ಲಿ ಮೃತಪಟ್ಟ ಹಿನ್ನೆಲೆಯಲ್ಲಿ ಸಚಿವರು ಕರೆದಿದ್ದ ಕೊಡಗು, ಚಾಮರಾಜನಗರ, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಯ ಜನಪ್ರತಿನಿಧಿಗಳ ಸಭೆಯಲ್ಲಿ ಇಂತಹ ಸಲಹೆ-ಸೂಚನೆಗಳು ಬಂದಿವೆ.

ಅರಣ್ಯದಲ್ಲಿ ಕುಡಿಯುವ ನೀರಿಗೆ ವ್ಯವಸ್ಥೆ ಇದ್ದರೂ, ಅದು ಸಾಲದಾಗಿದೆ, ಮತ್ತಷ್ಟು ಮೇವು ಹಾಗೂ ನೀರು ಸಂಗ್ರಹಕ್ಕೆ ಹೆಚ್ಚು ಒತ್ತು ಕೊಡಿ ಎಂದವರು ಹೇಳಿದರು.

ಜೊತೆಗೆ ಅರಣ್ಯದಂಚಿನಲ್ಲಿ ರೈಲ್ವೆ ಕಂಬಿಗಳನ್ನು ತಡೆಗೋಡೆಯಾಗಿ ನಿರ್ಮಿಸಿ ವಲಸೆ ತಪ್ಪಿಸಿ. ಅರಣ್ಯ ಗಡಿಯಲ್ಲಿ ವಿದ್ಯುತ್ ತಂತಿ ಅಳವಡಿಕೆ ಮತ್ತು ಕಂದಕ ತೋಡುವುದರಿಂದ ಯಾವುದೇ (5ನೇ ಪುಟಕ್ಕೆ)

## 'ದೇಹ' ಕುರೂಪ, 'ಆತ್ಮ' ಜ್ಯೋತಿ ಸ್ವರೂಪ

### ದೇಹದಲ್ಲಿನ ಯಂತ್ರಗಳ ಆಪರೇಟರ್ ಆತ್ಮ: ಡಾ.ಬಸವರಾಜ ರಾಜಋಷಿ



ದಾವಣಗೆರೆ, ಡಿ.5- ಕ್ಷಣ - ಕ್ಷಣಕ್ಕೂ ಬದಲಾಗುವ 'ಶರೀರ' ಕುರೂಪ, 'ಆತ್ಮ' ಜ್ಯೋತಿ ಸ್ವರೂಪವಾದದ್ದು. ಆದರೆ, ಈ ಕುರೂಪ ಶರೀರವೇ ನಾನು ಎಂದುಕೊಂಡು ನಾವೆಲ್ಲಾ ಬೀಗುತ್ತಿದ್ದೇವೆ ಎಂದು ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯ ಹುಬ್ಬಳ್ಳಿ ಉಪ ವಲಯದ ನಿರ್ದೇಶಕ ರಾಜಯೋಗಿ ಬ್ರಹ್ಮಾಕುಮಾರ ಡಾ.ಬಸವರಾಜ ರಾಜಋಷಿ ವಿಶ್ಲೇಷಿಸಿದರು.

ಇಲ್ಲಿನ ವಿದ್ಯಾನಗರದಲ್ಲಿರುವ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಆವರಣದಲ್ಲಿ ಸುದೀರ್ಘ ಒಂದು ತಿಂಗಳ ಕಾಲ ನಡೆಯುತ್ತಿರುವ 'ಶರಣರು ಕಂಡ ಶಿವ' ಪ್ರವಚನ ಮಾಲೆಯ ಎರಡನೇ ದಿನವಾದ ಮಂಗಳವಾರದ ಸಮಾರಂಭದಲ್ಲಿ ಅವರು ಪ್ರವಚನ ನೀಡಿದರು.

ಆತ್ಮ ಹೃದಯದಲ್ಲಿದೆ ಎಂದು ಹಲವರು ತಪ್ಪು ತಿಳಿದಿದ್ದಾರೆ. ಆತ್ಮ ಇರುವುದು ಬ್ರೈನ್ ಸಿಸ್ಟಂನಲ್ಲಿ. ಶರೀರದೆಲ್ಲೆಡೆ ಹರಡಲ್ಪಟ್ಟಿರುವ ಜ್ಞಾನವಾಹಿನಿ ಹಾಗೂ ಕ್ರಿಯಾ ವಾಹಿನಿ ನರಗಳ ಮೂಲಕ ಆತ್ಮ ಕೆಲಸ ಮಾಡುತ್ತದೆ ಎಂದು ಹೇಳಿದರು.

ದೇಹದಲ್ಲಿ ಮೆದುಳು ಕಂಪ್ಯೂಟರ್ ರೀತಿ ಕಾರ್ಯ ನಿರ್ವಹಿಸುತ್ತದೆ. ಕಣ್ಣು ಕ್ಯಾಮೆರಾ ರೀತಿ ಹೀಗೆ ಒಂದೊಂದು ಅಂಗಗಳು ಒಂದೊಂದು ಯಂತ್ರದ ರೀತಿ ಕಾರ್ಯ ನಿರ್ವಹಿಸುತ್ತವೆ. ಈ ಎಲ್ಲಾ ಯಂತ್ರಗಳನ್ನು ನಿಯಂತ್ರಿಸುವುದೇ ಆತ್ಮ ಎಂದು ರಾಜಋಷಿ ಪ್ರತಿಪಾದಿಸಿದರು.

ಯಾರ ಕಣ್ಣಿಗೆ ಕಾಣದ ಭೌತಿಕ ವಸ್ತು ಆತ್ಮ. ಅದು ಅಗೋಚರ ಶಕ್ತಿ. ಚೇತನ ಶಕ್ತಿ. ಅದನ್ನು ಅರಿಯುವುದು ಶರಣರ ಕರ್ತವ್ಯ. ಜ್ಞಾನದ ಮೂಲಕ ತನ್ನ ಸ್ವರೂಪವನ್ನು ತಾನು ಕಾಣಬೇಕು. ಅವನೇ ನಿಜವಾದ ಶರಣ ಎಂದು ಹೇಳಿದರು.

ಇಂದ್ರಿಯಗಳು ತನ್ನ ಸುಖಕ್ಕೆ ಆತ್ಮವನ್ನು ವಶ ಮಾಡಿಕೊಳ್ಳುತ್ತವೆ. ಉಪನಿಷತ್‌ನಲ್ಲಿ ಹೇಳಿರುವಂತೆ 'ಶರೀರ ಒಂದು ರಥವಿದ್ದಂತೆ, ಆತ್ಮ ಅದರ ಸಾರಥಿ. ಇಂದ್ರಿಯಗಳು ಕುದುರೆಗಳು. ಈ ಕುದುರೆಗಳನ್ನು ನಿಯಂತ್ರಿಸಿ, ರಥವನ್ನು ಸರಿದಾರಿಗೆ ಸಾಗಿಸುವುದೇ ಆತ್ಮದ ಕೆಲಸ' ಎಂದು ಅವರು ವಿವರಿಸಿದರು.

ಧ್ಯಾನ, ಪ್ರಾಣಾಯಾಮ ಶತಮಾನಗಳ ಹಿಂದೆಯೇ ಇದ್ದ ಭಾರತೀಯ ವಿಜ್ಞಾನ. ಆದರೆ, ಅದು ನಮಗಲ್ಲ. ಕೇವಲ ಸನ್ಯಾಸಿಗಳಿಗೆ ಮಾತ್ರ ಎಂದು ಮಡಿವಂತಿಕೆ ಮಾಡಲಾಗಿತ್ತು. ಆದರೆ, ಇಂದು ಪ್ರಧಾನಿಯವರು ಇಡೀ ವಿಶ್ವಕ್ಕೆ ಅದನ್ನು ಪರಿಚಯಿಸಿದ್ದಾರೆ ಎಂದು ಅವರು ಹೇಳಿದರು.

ಈಶ್ವರೀಯ ವಿಶ್ವವಿದ್ಯಾಲಯ ವಿದ್ಯಾನಗರ ಶಾಖೆ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ (5ನೇ ಪುಟಕ್ಕೆ)

## ಮತಯಂತ್ರಗಳನ್ನು ಟೀಕಿಸಿದ ವಿಪಕ್ಷಗಳಿಗೆ ಬಿಜೆಪಿ ತರಾಟೆ

ನವದೆಹಲಿ, ಡಿ. 5 – ವಿಧಾನಸಭಾ ಚುನಾವಣಾ ಸೋಲಿಗಾಗಿ ಮತ ಯಂತ್ರಗಳನ್ನು ಪ್ರಶ್ನಿಸುವ ವಿಪಕ್ಷ ನಾಯಕರನ್ನು ತರಾಟೆಗೆ ತೆಗೆದುಕೊಂಡಿರುವ ಬಿಜೆಪಿ, ಕುಣಿಯಲಾದವರು ನೆಲ ಡೊಂಕು ಎನ್ನುತ್ತಿದ್ದಾರೆ ಎಂದಿದೆ.

ರಾಜಸ್ಥಾನ, ಮಧ್ಯಪ್ರದೇಶ ಹಾಗೂ ಛತ್ತೀಸ್‌ಘಡ ಗಳಲ್ಲಿ ಬಿಜೆಪಿ ಗೆದ್ದ ನಂತರ, ಮತಯಂತ್ರಗಳ ಬಗ್ಗೆ ಪ್ರತಿಪಕ್ಷಗಳು ಅನುಮಾನ ವ್ಯಕ್ತಪಡಿಸಿವೆ. ಇದರಲ್ಲಿ ಹೊಸದೇನೂ ಇಲ್ಲ. ಪ್ರತಿಪಕ್ಷದವರು ಗೆದ್ದಾಗಲೆಲ್ಲ ಮತಯಂತ್ರಗಳು ಸರಿ ಇರುತ್ತವೆ. ಸೋತಾಗ ಮಾತ್ರ ಅವರು ಮತಯಂತ್ರಗಳ ಮೇಲೆ ಆರೋಪ ಮಾಡುತ್ತಾರೆ ಎಂದು ಕೇಂದ್ರ ಸಚಿವ ಗಿರಿರಾಜ್ ಸಿಂಗ್ ಹೇಳಿದ್ದಾರೆ.

ಇವೇ ಮತಯಂತ್ರಗಳಿಂದ ಕಳೆದ ಚುನಾವಣೆಗಳಲ್ಲಿ ಆಮ್ ಆದ್ಮಿ ಪಾರ್ಟಿ, ಸಮಾಜವಾದಿ ಪಕ್ಷ, ಬಿ.ಎಸ್.ಪಿ ಹಾಗೂ ಕಾಂಗ್ರೆಸ್ ಪಕ್ಷಗಳು ಗೆದ್ದಿವೆ. ಈಗ ಮಾತ್ರ ಕುಣಿಯಲು ಬಾರದವರು ನೆಲ ಡೊಂಕು ಎಂದರು ಎಂಬಂತೆ ವರ್ತಿಸುತ್ತಿದ್ದಾರೆ ಎಂದು ಬಿಜೆಪಿಯ ಇನ್ನೋರ್ವ ನಾಯಕ ಎಸ್ಪಿ. ಸಿಂಗ್ ಬಾಘೇಲ್ ಹೇಳಿದ್ದಾರೆ. ಮತಯಂತ್ರಗಳನ್ನು ತಿರುಚಲಾಗುತ್ತದೆ ಎಂದು ಹೇಳುವುದಾದರೆ, ಚುನಾವಣೆಗೆ ಹೋಗುವುದಾದರೂ ಏಕೆ? ಮತಯಂತ್ರಗಳನ್ನು ತಿರುಚಲಾಗಿದೆ ಎನ್ನುವುದಾದರೆ, ತೆಲಂಗಾಣದ ಚುನಾವಣೆಯನ್ನೂ ಪ್ರಶ್ನಿಸಿ. ಸೋಲನ್ನು ಒಪ್ಪಿಕೊಳ್ಳುವುದನ್ನು ಕಲಿಯಬೇಕು ಎಂದೂ ಅವರು ತಿಳಿಸಿದ್ದಾರೆ.

ಪ್ರತಿಪಕ್ಷಗಳು ಮತಯಂತ್ರಗಳ ಬಗ್ಗೆ ಅಳುತ್ತಿರಲಿ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮುಂದಿನ ಲೋಕಸಭಾ ಚುನಾವಣೆಯಲ್ಲಿ 400ಕ್ಕೂ ಹೆಚ್ಚು ಸ್ಥಾನಗಳಲ್ಲಿ ಗೆಲ್ಲಲಿದ್ದಾರೆ ಎಂದು ಬಿಜೆಪಿಯ ಇನ್ನೋರ್ವ ನಾಯಕ ದಿನೇಶ್ ಲಾಲ್ ಯಾದವ್ ಹೇಳಿದ್ದಾರೆ.

## ಲೋಕಾಯುಕ್ತ ದಾಳಿ

**(1ನೇ ಪುಟದಿಂದ)** ಕಚೇರಿಗಳ ಮೇಲೆ ದಾಳಿ ನಡೆಸಿ ಆಸ್ತಿ-ಪಾಸ್ತಿ ಮತ್ತು ದಾಖಲೆಗಳನ್ನು ವಶ ಪಡಿಸಿಕೊಳ್ಳಲಾಗಿದೆ.

ಬೆಂಗಳೂರಿನ ಬೆಸ್ಕಾಂ ಜಾಗೃತ ದಳದ ಟಿ.ಎನ್. ಸುಧಾಕರ ರೆಡ್ಡಿ, ಹಾಲು ಉತ್ಪಾದಕ ಸಹಕಾರ ಸಂಘದ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಎಚ್.ಎಸ್. ಕೃಷ್ಣಮೂರ್ತಿ, ಕ್ರೆಡೆಲ್ ಸೂಪರಿಂಟೆಂಡಿಂಗ್ ಇಂಜಿನಿಯರ್ ತಿಮ್ಮರಾಯಪ್ಪ, ನಂಜನಗೂಡು ಪ್ರಥಮ ದರ್ಜೆ ಸರ್ಕಾರಿ ಕಾಲೇಜು ಉಪನ್ಯಾಸಕ ಮಹದೇವ ಸ್ವಾಮಿ, ಬಳ್ಳಾರಿಯ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಚಂದ್ರಶೇಖರ್ ಲೋಕಾಯುಕ್ತ ದಾಳಿ ನಡೆದ ಅಧಿಕಾರಿಗಳ ಪಟ್ಟಿಯಲ್ಲಿ ಸೇರಿದ್ದಾರೆ.

# ವಕೀಲರ ಮನವಿ ಸ್ವೀಕರಿಸಲು ವಿಳಂಬ : ರಸ್ತೆ ತಡೆ - ಕ್ಷಮೆ ಯಾಚಿಸಿದ ತಹಶೀಲ್ದಾರ್



**ಹರಿಹರ**

ಹರಿಹರ, ಸೆ.5- ಚಿಕ್ಕಮಗಳೂರಿನಲ್ಲಿ ವಕೀಲರ ಸಂಘದ ಅಧ್ಯಕ್ಷರು ಮತ್ತು ಇತರೆ ಸದಸ್ಯರ ಮೇಲೆ ದಾಖಲಾಗಿರುವ ಸುಳ್ಳು ದೂರುಗಳನ್ನು ವಾಪಸ್ ಪಡೆಯಬೇಕು ಹಾಗೂ ವಕೀಲರ ಸಂರಕ್ಷಣೆ ಕಾಯ್ದೆಯನ್ನು ಜಾರಿಗೊಳಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕು ಎಂದು ಆಗ್ರಹಿಸಿ ತಾಲ್ಲೂಕು ವಕೀಲರ ಸಂಘದ ವತಿಯಿಂದ ತಹಶೀಲ್ದಾರ್‌ಗೆ ಇಂದು ಮನವಿ ಸಲ್ಲಿಸಲಾಯಿತು.

ಈ ವೇಳೆ ವಕೀಲರ ಸಂಘದ ಅಧ್ಯಕ್ಷ ಪಿ. ರುದ್ರಗೌಡ ಮಾತನಾಡಿ, ಚಿಕ್ಕಮಗಳೂರು ವಕೀಲರ ಸಂಘದ ಸದಸ್ಯರಾದ ಪ್ರೀತಮ್ ಅವರ ಮೇಲೆ ಕ್ಷುಲ್ಲಕ ಕಾರಣಕ್ಕೆ ಪೊಲೀಸ್ ಇಲಾಖೆಯ ಸಿಬ್ಬಂದಿಗಳು ಪೊಲೀಸ್ ಠಾಣೆಯಲ್ಲಿ ತೀವ್ರ ತೆರನಾದ ಹಲ್ಲೆ ನಡೆಸಿದ್ದು, ಈ ಕೃತ್ಯವನ್ನು ಎಸಗಿದ ಪೊಲೀಸ್ ಸಿಬ್ಬಂದಿಗಳ ಮೇಲೆ ಕೂಡಲೇ ಕಾನೂನು ಕ್ರಮಗಳನ್ನು ಕೈಗೊಂಡು ಅವರನ್ನು ಖಾಯಂ ಆಗಿ ಕೆಲಸದಿಂದ ವಜಾಗೊಳಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ವಕೀಲರಾದ ಸಾಕಮ್ಮ, ಗಣೇಶ ಕೆ. ದುರ್ಗದ್, ಹಾಲಪ್ಪ, ಬಾಲಾಜಿ ಸಿಂಗ್, ಬಿ. ನಾಗರಾಜ್, ಆನಂದ್, ಮಾರುತಿ ಬೇಡರ್, ಅಬ್ದುಲ್ ರೆಹಮಾನ್ ಬಾಷಾ, ಕೆ.ವಿ. ನಾಗರಾಜ್, ಪ್ರಕಾಶ್ ಬಿ.ಸಿ., ಮಹಾದೇವಯ್ಯ, ಸಿ.ಜಿ. ಉಮೇಶ್ ಹುಲ್ಮನಿ, ಅರುಣ್ ಕುಮಾರ್, ಬಿ.ಹೆಚ್. ಚೆನ್ನಪ್ಪ, ಸಾಕಮ್ಮ, ಶುಭಾ, ವಿರಾನಾ, ರೇಷ್ಮಾ ಎಂ.ಎಸ್. ವನಜಾಕ್ಷಿ ಪಾಟೀಲ್, ಚೇತನಾ ಆನಂದ್, ಕೆ. ರಾಜಶೇಖರ್, ಶಿವಕುಮಾರ್, ಸಾವಿತ್ರ ಚೌಡಪ್ಪ, ಸುರೇಶ್ ಹಣಗಿ ಹಾಗು ಇತರರು ಹಾಜರಿದ್ದರು.

**ಕ್ಷಮೆಯಾಚನೆ :** ವಕೀಲರು ಮನವಿ ಅರ್ಪಿಸುವ ಸಮಯದಲ್ಲಿ ತಹಶೀಲ್ದಾರ್ ಬಸವರಾಜಯ್ಯ ಕಚೇರಿಯಲ್ಲಿ ಇದ್ದರೂ ಸಹ ಬೇಗನೆ ಹೊರಗೆ ಬಂದು ಮನವಿ ಪತ್ರ ಸ್ವೀಕರಿಸುವಲ್ಲಿ ವಿಳಂಬ ಮಾಡಿದ್ದರಿಂದ, ವಕೀಲರು ತಹಶೀಲ್ದಾರ್ ವಿರುದ್ಧವೂ ಘೋಷಣೆ ಕೂಗಿ, ಗಾಂಧಿ ವೃತ್ತದಲ್ಲಿ ರಸ್ತೆ ತಡೆದು ಪ್ರತಿಭಟನೆ ಮಾಡಲಿಕ್ಕೆ ಮುಂದಾಗಿದ್ದರಿಂದ ಆಗ ಸ್ಥಳಕ್ಕೆ ಆಗಮಿಸಿದ ತಹಶೀಲ್ದಾರ್ ಪ್ರತಿಭಟನೆ ನಿರತರಾಗಿದ್ದ ವಕೀಲರಿಗೆ ಕ್ಷಮೆಯಾಚಿಸಿ, ಮನವಿಯನ್ನು ಸ್ವೀಕರಿಸಿದ ಘಟನೆ ನಡೆಯಿತು.

**ತಡ ಮಾಡಿದ ಪರಿಣಾಮ :** ಸಾರ್ವಜನಿಕರು ಯಾವುದೇ ರೀತಿಯ ಹೋರಾಟ ಮಾಡಿ ತಹಶೀಲ್ದಾರ್ ಕಚೇರಿಗೆ ಆಗಮಿಸಿ, ಸರ್ಕಾರಕ್ಕೆ ಮನವಿ ಅರ್ಪಿಸುವ ಪದ್ಧತಿ ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಕಚೇರಿಯಲ್ಲಿ ಇದ್ದರೂ ಸಹ ಹೊರಗಡೆ ಬಂದು ಮನವಿ ಸ್ವೀಕರಿಸುವಲ್ಲಿ ತಡ ಮಾಡಿದ ಪರಿಣಾಮವಾಗಿ ತಹಶೀಲ್ದಾರ್ ಬಸವರಾಜಯ್ಯ ವಿರುದ್ಧ ಘೋಷಣೆ ಕೂಗಿ ರಸ್ತೆ ಬಂದ್ ಮಾಡುವಂತಹ ಪರಿಸ್ಥಿತಿ ನಿರ್ಮಾಣ ಆಯಿತು ಎಂದು ವಕೀಲರ ಸಂಘದ ಅಧ್ಯಕ್ಷ ಪಿ. ರುದ್ರಗೌಡ ಹಾಗೂ ವಕೀಲ ಆನಂದ್ ಹಾಲಪ್ಪ ತಿಳಿಸಿದರು.

**ತಹಶೀಲ್ದಾರ್ ಸ್ಪಷ್ಟನೆ :** ಮನವಿ ಸಲ್ಲಿಸಲು ವಕೀಲರ ಸಂಘದವರು ಕಚೇರಿಗೆ ಬಂದಾಗ ಜಿಲ್ಲಾಧಿಕಾರಿಗಳು ಮಧ್ಯಾಹ್ನ ವಿ.ಸಿ. ಮೀಟಿಂಗ್ ಕರೆದ ಪ್ರಯುಕ್ತ, ನಮ್ಮ ಇಲಾಖೆಯ ಸಿಬ್ಬಂದಿಗಳ ಸಭೆಯನ್ನು ಕರೆದು ಅವರ ಜೊತೆಗೆ ಚರ್ಚೆ ಮಾಡುತ್ತಾ, ಆ ವಿಚಾರಕ್ಕೆ ಸಂಬಂಧಿಸಿದಂತೆ ಪೂರ್ವ ತಯಾರಿ ನಡೆಸುವಾಗ ಹೊರಗಡೆ ಬಂದು ಮನವಿ ಸ್ವೀಕರಿಸಲು ತಡವಾಯಿತು ಎಂದು ಹೇಳಿದರು.

## ಚುನಾವಣೆ ನಂತರ ಹತಾಶೆ : ವಿಭಜಕ ಶಕ್ತಿಗಳ ಬಗ್ಗೆ ಪ್ರಧಾನಿ ಎಚ್ಚರಿಕೆ

ನವದೆಹಲಿ, ಡಿ. 5 - ವಿಧಾನಸಭಾ ಚುನಾವಣೆಯ ಫಲಿತಾಂಶದ ನಂತರ ಹತಾಶೆಯ ಹೇಳಿಕೆಗಳನ್ನು ನೀಡುತ್ತಿರುವವರನ್ನು ತರಾಟೆಗೆ ತೆಗೆದುಕೊಂಡಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ವಿಭಜನಾತ್ಮಕ ಶಕ್ತಿಗಳ ಬಗ್ಗೆ ಎಚ್ಚರವಾಗಿರಬೇಕು ಎಂದಿದ್ದಾರೆ.

ಟ್ವಿಟ್ಟರ್‌ನಲ್ಲಿ ಮೆಲ್ಟ್‌ಡೌನ್ - ಎ - ಅಜಮ್ (ಹತಾಶೆಯ ಮಹಾಪೂರ) ಎಂಬ ಶೀರ್ಷಿಕೆಯ ವಿಡಿಯೋ ಹಂಚಿಕೊಂಡಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಮುಂದೆ ಇನ್ನಷ್ಟು ಹತಾಶೆಯ ದಿನಗಳು ಬರಲಿವೆ ಎಂದಿದ್ದಾರೆ.

ವಿಧಾನಸಭಾ ಚುನಾವಣೆಯಲ್ಲಿ ಉತ್ತರದ ಮೂರು ರಾಜ್ಯಗಳಲ್ಲಿ ಬಿಜೆಪಿ ಹಾಗೂ ದಕ್ಷಿಣದ ಒಂದು ರಾಜ್ಯದಲ್ಲಿ ಕಾಂಗ್ರೆಸ್ ಗೆದ್ದಿತ್ತು. ಈ ಹಿನ್ನೆಲೆಯಲ್ಲಿ, ಹಲವರು ಸಾಮಾಜಿಕ ಜಾಲತಾಣಗಳಲ್ಲಿ ಉತ್ತರ ಭಾರತೀಯರನ್ನು ಅವಹೇಳನ ಮಾಡಿದ್ದರು. ದಕ್ಷಿಣ ಭಾರತೀಯರನ್ನು ಪ್ರಶಂಸಿಸಿ, ಉತ್ತರ ಭಾರತ ಹಾಗೂ ದಕ್ಷಿಣದ ನಡುವೆ ವಿಭಜನೆ - ಗಡಿ ಹೆಚ್ಚಾಗುತ್ತಿದೆ ಎಂದೂ ಕೆಲವರು ಹೇಳಿದ್ದರು.

ಈ ಹಿನ್ನೆಲೆಯಲ್ಲಿ ಪ್ರಸಾರ ಮಾಡಿದ ಸುದ್ದಿಯ ತುಣುಕನ್ನು ಹಂಚಿಕೊಂಡಿರುವ ಮೋದಿ, ಪ್ರತಿಪಕ್ಷಗಳು ಉದ್ಧಟತನ, ಸುಳ್ಳು, ನಿರಾಶಾವಾದ ಹಾಗೂ ಅಜ್ಞಾನಗಳಲ್ಲಿ ಸಂತೋಷವಾಗಿದ್ದಾರೆ ಎಂದು ತರಾಟೆಗೆ ತೆಗೆದುಕೊಂಡಿದ್ದಾರೆ.

## ಹೇಳಿಕೆ : ಪಕ್ಷಭೇದ ಮರೆತು ಖಂಡನೆ

**(1ನೇ ಪುಟದಿಂದ)** ಮಸೂದೆಯ ಕುರಿತು ಚರ್ಚೆಯಲ್ಲಿ ಮಾತನಾಡುತ್ತಿದ್ದ ಸೆಂಥಿಲ್ ಕುಮಾರ್, ಬಿಜೆಪಿ ಕೇವಲ ಹಿಂದಿ ಭಾಷಿಗರ ರಾಜ್ಯಗಳಲ್ಲಿ ಗೆಲ್ಲಬಹುದು. ದಕ್ಷಿಣದಲ್ಲಿ ಗೆಲ್ಲಲು ಸಾಧ್ಯವಿಲ್ಲ ಎಂದರು.

ಹಿಂದಿ ಭಾಷಿಗರ ರಾಜ್ಯಗಳನ್ನು ಅವರು ಗೋಮೂತ್ರ ರಾಜ್ಯಗಳು ಎಂದಿದ್ದನ್ನು ಲೋಕಸಭಾಧ್ಯಕ್ಷರು ಕಡತಗಳಿಂದ ತೆಗೆದು ಹಾಕಿದ್ದಾರೆ.

ಪಕ್ಷಭೇದವಿಲ್ಲದೇ ಹಲವು ಸಂಸದರು ಡಿಎಂಕೆ ನಾಯಕನ ಹೇಳಿಕೆಯನ್ನು ಖಂಡಿಸಿದರು. ನಂತರ ಅವರ ಹೇಳಿಕೆ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಯಿತು.

ಟೀಕೆಯ ನಂತರ ಸೆಂಥಿಲ್ ಕುಮಾರ್ ತಮ್ಮ ಹೇಳಿಕೆಗಾಗಿ ಕ್ಷಮೆ ಯಾಚಿಸಿದ್ದಾರೆ. ಸೆಂಥಿಲ್ ಕುಮಾರ್ ಹೇಳಿಕೆ ದ್ವೇಷ ಭಾಷಣ ಎಂದಿರುವ ಬಿಜೆಪಿ, ಮುಂದಿನ ಚುನಾವಣೆಯಲ್ಲಿ ದಕ್ಷಿಣದ ರಾಜ್ಯಗಳಲ್ಲೂ ಐ.ಎನ್.ಡಿ.ಐ.ಎ. ಒಕ್ಕೂಟ ಅಸ್ತಿತ್ವ ಕಳೆದುಕೊಳ್ಳಲಿದೆ ಎಂದು ಹೇಳಿದೆ.

ಸೆಂಥಿಲ್ ಕುಮಾರ್ ಹೇಳಿಕೆಯನ್ನು ಕಾಂಗ್ರೆಸ್ ಸಂಸದ ಕಾರ್ತಿ ಚಿದಂಬರಂ ಹಾಗೂ ಮಾಜಿ ಸಚಿವ ಮಿಲಿಂದ್ ದೇವರಾ ತರಾಟೆಗೆ ತೆಗೆದುಕೊಂಡಿದ್ದಾರೆ.

## ವಿದ್ಯಾರ್ಥಿನಿಯರ ಕಡೆ ನಡೆದಾಗ..!



**(1ನೇ ಪುಟದಿಂದ)** ಸ್ಪರ್ಧಾತ್ಮಕ ಪರೀಕ್ಷೆಗೂ ಅಗತ್ಯವಾದ ಜ್ಞಾನ, ಪುಸ್ತಕ ಹಾಗೂ ನಿಯತಕಾಲಿಕಗಳಿಂದ ಸಿಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಐ.ಕ್ಯೂ.ಎ.ಸಿ. ಸಹ ಸಂಚಾಲಕ ಪ್ರೊ. ಆರ್.ಆರ್. ಶಿವಕುಮಾರ್ ಹಾಗೂ ಎ.ವಿ.ಕೆ. ಕಾಲೇಜಿನ ಗ್ರಂಥಪಾಲಕ ಹೆಚ್. ಸತೀಶ್ ಉಪಸ್ಥಿತರಿದ್ದರು.

ಎಸ್.ಜಿ. ಪಲ್ಲವಿ ಪ್ರಾರ್ಥಿಸಿದರೆ, ಅನುಷ ಬಾಯಿ ಸ್ವಾಗತಿಸಿದರು. ಕೆ.ಎಂ. ಲಕ್ಷ್ಮಿ ಹಾಗೂ ಕೆ.ಪಿ. ಭಾರ್ಗವಿ ನಿರೂಪಿಸಿದರು. ಬಿ.ಹೆಚ್. ಅಕ್ಷಿತ ವಂದಿಸಿದರು.

## ಹರಪನಹಳ್ಳಿ : ಬರಗಾಲದಲ್ಲಿ ಸ್ಪ್ರಿಂಕ್ಲರ್ ಪೈಪ್ ಬೆಲೆ ಏರಿಸಿರುವುದು ಸರಿಯಲ್ಲ

ಹರಪನಹಳ್ಳಿ, ಡಿ.5- ಬಿಜೆಪಿ ಸರ್ಕಾರದಲ್ಲಿ ಕೃಷಿ ಇಲಾಖೆಯಿಂದ ರೈತರಿಗೆ ಕೊಡುತ್ತಿದ್ದ ಸ್ಪ್ರಿಂಕ್ಲರ್ ಪೈಪ್‌ನ ದರ 1900 ಕ್ಕೆ ನೀಡುತ್ತಿತ್ತು. ಈಗ ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಕೃಷಿ ಇಲಾಖೆಯ ವತಿಯಿಂದ ನೀಡುವ ಸ್ಪ್ರಿಂಕ್ಲರ್ ಪೈಪ್‌ನ ದರವನ್ನು 4600 ರೂ.ಗಳಿಗೆ ಹೆಚ್ಚಿಸಿರುವ ಕ್ರಮ ಸರಿಯಿಲ್ಲ ಎಂದು ಜಿಲ್ಲಾ ರೈತ ಮುಖಂಡ ಲಿಂಗರಾಜ ಫಣಿಯಾಪುರ ಹೇಳಿದರು.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿ, ಈ ವರ್ಷ ಅದರಲ್ಲೂ ಮಳೆ ಇಲ್ಲದೇ ರೈತ ಗೋಳಾಡುತ್ತಿರುವಾಗ ಬರ ಅಧ್ಯಯನ ಮಾಡಿ, ಕೇವಲ ರೈತರಿಗೆ 2000 ಸಾವಿರ ರೂಪಾಯಿ ಕೊಡುತ್ತೇವೆ ಎಂದು ಘೋಷಿಸಿದೆ. ಕನಿಷ್ಠ ರೈತರಿಗೆ ಇಪ್ಪತ್ತೈದು ಸಾವಿರ ರೂ.ಗಳನ್ನು (25,000) ಸರ್ಕಾರ ಘೋಷಿಸಬೇಕೆಂದು ರೈತ ಮುಖಂಡ ಫಣಿಯಾಪುರ ಲಿಂಗರಾಜ ಒತ್ತಾಯಿಸಿದರು. ಒಂದು ಕಡೆ ಸರ್ಕಾರದಿಂದ ಕೊಡುವ ಕೃಷಿ ಇಲಾಖೆಗಳ ಸಾಮಗ್ರಿಗಳ ಬೆಲೆ ಏರಿಕೆ ಹಾಗೂ ಬರ ಪರಿಹಾರ ರೈತರ ಮೇಲೆ ಬರೆ ಎಳೆದಂತಾ ಆಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

## ಅಲ್ಪಸಂಖ್ಯಾತರಿಗೆ 5 ಸಾವಿರ ಕೋಟಿ

**(1ನೇ ಪುಟದಿಂದ)** ಸಮುದಾಯಗಳ ಮೇಲೆ ಸವಾರಿ ಮಾಡುವ ರೀತಿ ಒಂದು ಸಮುದಾಯವನ್ನು ಓಲೈಕೆ ಮಾಡಲು ಹೊರಟಿರುವುದು ಸರಿಯಲ್ಲ ಎಂದು ಹೇಳಿದರು. ರಾಜ್ಯದಲ್ಲಿ ಬರ ತಾಂಡವವಾಡುತ್ತಿದೆ, ಇದುವರೆಗೂ ಪರಿಹಾರ ಕಾಮಗಾರಿಗಳನ್ನು ಕೈಗೆತ್ತಿಕೊಂಡಿಲ್ಲ, ಸಂಪುಟದ ಯಾವ ಮಂತ್ರಿಯೂ ಪರಿಸ್ಥಿತಿ ಅರಿಯುವ ಕೆಲಸ ಮಾಡಿಲ್ಲ ಎಂದು ಆರೋಪಿಸಿದರು.

## ಹರಪನಹಳ್ಳಿ ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ವೈ.ಡಿ.ಅಣ್ಣಪ್ಪ ಅವರಿಗೆ ಸನ್ಮಾನ



ಹರಪನಹಳ್ಳಿ, ಡಿ.5- ತಾಲ್ಲೂಕಿನ ಬೆಣ್ಣಿಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವತಿಯಿಂದ ನೂತನ ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಅರಸೀಕೆರೆ ವೈ.ಡಿ.ಅಣ್ಣಪ್ಪ ಅವರಿಗೆ ಸೋಮವಾರ ಸನ್ಮಾನ ಹಾಗೂ ಅಭಿನಂದನೆ ಸಮಾರಂಭ ಹಮ್ಮಿಕೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಾದ ಕೆ.ಶಶಿಧರ್, ನಿರ್ದೇಶಕರಾದ ಶೌಕತ್ ಅಲಿ, ಸಿದ್ದನಗೌಡ, ಬಿ.ಸುರೇಶ್, ತಾ.ಪಂ ಮಾಜಿ ಅಧ್ಯಕ್ಷೆ ಅನ್ನಪೂರ್ಣಮ್ಮ, ತಾ.ಪಂ ಮಾಜಿ ಸದಸ್ಯ ಸಾಬಳ್ಳಿ ಮಂಜುನಾಥ್, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಮುತ್ತಿಗಿ ಜಂಬಣ್ಣ, ನಿಚ್ಚವ್ವನಹಳ್ಳಿ ಗ್ರಾ.ಪಂ ಅಧ್ಯಕ್ಷ ಕೆ.ಆನಂದ, ಬೆಣ್ಣಿಹಳ್ಳಿ ಗ್ರಾ.ಪಂ ಸದಸ್ಯ ಹುಸೇನ್, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಜಗದೀಶ್, ಮುಖಂಡರಾದ ಪ್ರಕಾಶ್, ಪರಶುರಾಮ್, ಪ್ರಶಾಂತ ಪಾಟೀಲ್, ಕರಿಬಸವನಗೌಡ, ಬಸಪ್ಪ, ನಾಜಿಯಾ ಬೇಗಂ, ಷರೀಫ್ ಸೇರಿದಂತೆ ಇತರರು ಇದ್ದರು.

## ಹರಿಹರ : ಕಾಮಗಾರಿ ಪೂರ್ಣ ಆಗುವವರೆಗೂ ಧರಣಿ ಸತ್ಯಾಗ್ರಹ



ಹರಿಹರ, ಡಿ,5- ನಗರದ ಜಯ ಕರ್ನಾಟಕ ಸಂಘಟನೆ ತಾಲ್ಲೂಕು ಘಟಕದ ವತಿಯಿಂದ ಮಂಗಳವಾರ 9ನೇ ದಿನದ ಧರಣಿ ಸತ್ಯಾಗ್ರಹ ಲೋಕೋಪಯೋಗಿ ಇಲಾಖೆಯ ಹೆದ್ದಾರಿಯ ಮುಂಭಾಗ ನಡೆಸಲಾಯಿತು. ಈ ವೇಳೆ ಸ್ಥಳಕ್ಕೆ ಆಗಮಿಸಿದ ತಾಲ್ಲೂಕು ದಂಡಾಧಿಕಾರಿ ಬಸವರಾಜಯ್ಯ ಮತ್ತು ಪಿಎಸ್‌ಐ ದೇವಾನಂದ್ ಮಾತನಾಡಿ, ಸರ್ವೆ ಕಾರ್ಯ ಪೂರ್ಣಗೊಳಿಸಿ ಕಾಮಗಾರಿ ಆರಂಭ ಮಾಡುವುದಾಗಿ ಭರವಸೆ ನೀಡಿದರು.

ಜಯಕರ್ನಾಟಕ ಸಂಘಟನೆಯ ಮುಖಂಡ ಗೋವಿಂದ ಮಾತನಾಡಿ, ನಗರದ ಕೆ.ಇ.ಬಿ. ಮುಂಭಾಗದ ಬೀರೂರು - ಸಮ್ಮಸಗಿ ರಾಜ್ಯ ಹೆದ್ದಾರಿ ತುಂಗಭದ್ರಾ ಹೊಸ ಸೇತುವೆ ಸಮೀಪದ ರಸ್ತೆ ಸಂಪೂರ್ಣ ಹದಗೆಟ್ಟಿದ್ದು, ಸಾರ್ವಜನಿಕರು, ವಾಹನ ಸವಾರರರಿಗೆ ತುಂಬಾ ತೊಂದರೆಯಾಗಿದೆ.

ಅನೇಕ ವರ್ಷಗಳಿಂದ ತೊಂದರೆ ಅನುಭವಿಸುತ್ತಿರುವ ಹಿನ್ನೆಲೆಯಲ್ಲಿ ಜಯ ಕರ್ನಾಟಕ ಸಂಘಟನೆ ವತಿಯಿಂದ ಕಾಮಗಾರಿ ಆಗುವವರೆಗೂ ಧರಣಿ ಸತ್ಯಾಗ್ರಹ ಮುಂದುವರೆಸುತ್ತೇವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ತಾಲೂಕು ಅಧ್ಯಕ್ಷ ಗೋವಿಂದ್, ಉಪಾಧ್ಯಕ್ಷ ಎಂ. ಆರ್. ಆನಂದ್, ಪ್ರಧಾನ ಕಾರ್ಯದರ್ಶಿ ಸಿ.ಎಚ್. ಸುನಿಲ್ ಕುಮಾರ್, ಭರತ್ ಭಾನುವಳ್ಳಿ, ಅಪ್ಪು ಪ್ರದೀಪ್, ಗಿರೀಶ್ ಸ್ವಾಮಿ, ಅಭಿ, ನಾಗ, ಆಟೋ ಸಂತೋಷ್, ಬಚ್ಚನ್, ಚಂದ್ರಪ್ಪ, ಪ್ರದೀಪ್, ಮೊಹಮ್ಮದ್ ಅಲಿ ಉಪಸ್ಥಿತರಿದ್ದರು.

## ಮದ್ಯದ ಪರವಾನಗಿ ನಿಯಮ ಬದಲಾವಣೆ

**(1ನೇ ಪುಟದಿಂದ)** ಶಾಸಕರು ಆರೋಪಿಸಿದರು. ಆರೋಪ ತಳ್ಳಿ ಹಾಕಿದ ಆಗಿನ ಅಬಕಾರಿ ಸಚಿವ ಕೆ. ಗೋಪಾಲಯ್ಯ, ಸರ್ಕಾರ ಈ ಬಗ್ಗೆ ತನಿಖೆ ನಡೆಸಲಿ ಎಂದು ಸವಾಲು ಹಾಕಿದರು.

ಮಧ್ಯ ಪ್ರವೇಶಿಸಿದ ವಿಪಕ್ಷ ನಾಯಕ ಆರ್. ಅಶೋಕ್, ನಮ್ಮ ಸರ್ಕಾರವೇ ಇರಲಿ, ಬೇರೆಯವರ ಸರ್ಕಾರವೇ ಇರಲಿ, ಈ ಬಗ್ಗೆ ತನಿಖೆಯಾಗಲಿ. ಅಂತಹ ಪರವಾನಗಿ ರದ್ದಾಗಲಿ ಎಂದರು.


ಲೋಪಗಳಾಗಿರುವುದನ್ನು ಒಪ್ಪಿಕೊಂಡ ತಿಮ್ಮಾಪುರ, ವಾಹನ ನಿಲುಗಡೆ ಹಾಗೂ ಕಟ್ಟಡದ ವಿನ್ಯಾಸಕ್ಕೆ ಸಂಬಂಧಿಸಿದಂತೆ ಕಾನೂನು ನಿರ್ದಿಷ್ಟವಾಗಿಲ್ಲ. ಮುಂಬರುವ ದಿನಗಳಲ್ಲಿ ಈ ಬಗ್ಗೆ ಸ್ಪಷ್ಟತೆ ತರಲಾಗುವುದು. ರಂಗಪ್ಪ ವಿರುದ್ಧವೂ ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

ಇದೇ ವೇಳೆ ಮಳವಳ್ಳಿ ಕಾಂಗ್ರೆಸ್ ಶಾಸಕ ಪಿ. ಎಂ.ನರೇಂದ್ರಸ್ವಾಮಿ ಮಾತನಾಡಿ, ಅಬಕಾರಿ ಪರವಾನಗಿಯಲ್ಲಿ ಮೀಸಲಾತಿ ಜಾರಿಗೆ ತರುವಂತೆ ಸರ್ಕಾರವನ್ನು ಒತ್ತಾಯಿಸಿದರು. ಇದಕ್ಕೆ ಕಾನೂನು ತಿದ್ದುಪಡಿ ಮಾಡುವ ಅಗತ್ಯವಿದೆ ಎಂದು ಸಚಿವರು ಹೇಳಿದರು.

ಆದರೆ, ಮೀಸಲಾತಿ ಹೆಸರಿನಲ್ಲಿ ಮದ್ಯದಂಗಡಿಗಳ ಸಂಖ್ಯೆ ಹೆಚ್ಚಿಸಬಾರದು ಎಂದು ಬಿಜೆಪಿ ಶಾಸಕ ವಿ. ಸುನೀಲ್ ಕುಮಾರ್ ಮತ್ತು ಅಶೋಕ ಹೇಳಿದರು.

## ಮಲೇಬೆನ್ನೂರು : ಸೆರೆಗೆ ಸಿಗದೆ ಸತಾಯಿಸಿದ ಮುಷ್ಯ

ಮಲೇಬೆನ್ನೂರು, ಡಿ.5- ಪಟ್ಟಣದಲ್ಲಿ ಸಾರ್ವಜನಿಕರ ಮೇಲೆ ದಾಳಿ ಮಾಡಿ ಗಾಯಗೊಳಿಸುತ್ತಿರುವ ಮುಷ್ಯನನ್ನು ಸೆರೆ ಹಿಡಿಯಲು ಮಂಗಳವಾರ ಪುರಸಭೆ ಮತ್ತು ಅರಣ್ಯ ಇಲಾಖೆಯವರು ನಡೆಸಿದ ಕಾರ್ಯಾಚರಣೆ ಸಫಲವಾಗಲಿಲ್ಲ.



ಮಲೇಬೆನ್ನೂರಿನಲ್ಲಿ ನಾಲ್ವರನ್ನು ಕಚ್ಚಿ ಗಾಯಗೊಳಿಸಿರುವ ಈ ಮುಷ್ಯವು ಪುರಸಭೆ ಹಾಗೂ ಅರಣ್ಯ ಇಲಾಖೆಯವರ ಸೆರೆಗೆ ಸಿಗದೆ ಗಿಡಗಳ ಮಧ್ಯದಲ್ಲಿ ಕುಳಿತು ಕಿಚಾಯಿಸಿತು.

ಸೋಮವಾರ ನಾಲ್ವರ ಮೇಲೆ ದಾಳಿ ಮಾಡಿ, ಗಾಯಗೊಳಿಸಿದ್ದ ಮುಷ್ಯವು ಈ ದಿನ ಯಾರ ಮೇಲೂ ದಾಳಿ ಮಾಡಿಲ್ಲ. ಬೆಳಿಗ್ಗೆಯಿಂದಲೇ ಕಾರ್ಯಾಚರಣೆ ಆರಂಭಿಸಿದ ಪುರಸಭೆ ಹಾಗೂ ಅರಣ್ಯ ಇಲಾಖೆಯ ಸಿಬ್ಬಂದಿಗಳು ಮುಷ್ಯ ಇದ್ದ ಸ್ಥಳದಲ್ಲಿ ಬೋನು ಇಟ್ಟು ಮತ್ತು ಅದಕ್ಕೆ ಬೇಕಾದ ಆಹಾರ ಪದಾರ್ಥಗಳನ್ನು ಇಟ್ಟು ಕಾದರೂ ಆ ಮುಷ್ಯ ಬೋನಿನ ಹತ್ತಿರ ಬರದೇ ಎಲ್ಲರನ್ನೂ ಸತಾಯಿಸಿತು.

ನಂತರ ಮುಷ್ಯ ಸ್ಥಳ ಬದಲಾವಣೆ ಮಾಡಿದಂತೆ ಬೋನ್ ಅನ್ನು ತೆಗೆದುಕೊಂಡು ಹೋಗಿ ಮುಷ್ಯ ಇರುವ ಸ್ಥಳದಲ್ಲಿಯೇ ಇಟ್ಟು ತಾಸುಗಟ್ಟಲೇ ಕಾದು ಏನೆಲ್ಲಾ ಪ್ರಯತ್ನ ಮಾಡಿದರೂ ಮುಷ್ಯ ಸೆರೆಗೆ ಸಿಗಲಿಲ್ಲ. ಬುಧವಾರ ಕಾರ್ಯಾಚರಣೆ ಮುಂದುವರೆಯಲಿದೆ ಎಂದು ಪುರಸಭೆ ಮುಖ್ಯಾಧಿಕಾರಿ ಎ.ಸುರೇಶ್ ಸಂಜೆ 'ಜನತಾವಾಣಿ'ಗೆ ತಿಳಿಸಿದರು. ಅರಣ್ಯ ಇಲಾಖೆಯ ಸದಾನಂದ್, ಸತೀಶ್ ಹಾಗೂ ಸಿಬ್ಬಂದಿಗಳು ಈ ವೇಳೆ ಹಾಜರಿದ್ದರು.

## ಮಕ್ಕಳಿಗೆ ಶ್ರೀಮಂತಿಕೆಯ ರುಚಿ ತೋರಿಸಬೇಡಿ

### ಜಿಗಳಿ : ಎನ್ನೆಸ್ಸೆಸ್ ಶಿಬಿರದಲ್ಲಿ ಪೋಷಕರಿಗೆ ಡಿವೈಎಸ್ಪಿ ಪ್ರಕಾಶ್ ಕಿವಿಮಾತು



ಮಲೇಬೆನ್ನೂರು, ಡಿ.5- ಮಕ್ಕಳಿಗೆ ಶ್ರೀಮಂತಿಕೆಯ ರುಚಿ ತೋರಿಸಬೇಡಿ. 18 ವರ್ಷ ತುಂಬದ ಹೊರತು ಬೈಕು, ಕಾರುಗಳ ಕೀ ಕೊಡಬೇಡಿ. ಬದಲಿಗೆ ಅವರಿಗೆ ಕಷ್ಟ-ಸುಖ ಎರಡರ ಅನುಭವ ಮಾಡಿಸಿ. ಆಗ ಅವರು ನೀವು ಬಯಸಿದ ಮಕ್ಕಳಾಗಿ ಬೆಳೆಯುತ್ತಾರೆ ಎಂದು ಜಿಲ್ಲಾ ಮೀಸಲು ಪೊಲೀಸ್ ಪಡೆಯ ಡಿವೈಎಸ್ಪಿ ಪಿ.ಬಿ.ಪ್ರಕಾಶ್ ಮಕ್ಕಳ ತಂದೆ-ತಾಯಿಗಳಿಗೆ ಕಿವಿಮಾತು ಹೇಳಿದರು.

ಅವರು, ಮಂಗಳವಾರ ಜಿಗಳಿ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣ ದಲ್ಲಿ ಹರಿಹರದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವತಿಯಿಂದ ಹಮ್ಮಿಕೊಂಡಿರುವ ಎನ್ನೆಸ್ಸೆಸ್ ಶಿಬಿರದ 4ನೇ ದಿನದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು.

ಬದುಕಿನಲ್ಲಿ ಅದ್ಭುತಗಳನ್ನು ಸಾಧಿಸಲು ಡಾ. ಅಂಬೇಡ್ಕರ್ ಅವರಂತೆ ದಿನದ 20 ತಾಸು ಓದುವ ಛಲ ಬೆಳೆಸಿಕೊಳ್ಳಬೇಕು. ಬದುಕಿಗೆ ಒಳ್ಳೆಯ ಅರ್ಥ ಕೊಡುವ ಶಿಕ್ಷಣವನ್ನು ಕಲಿಯಿರಿ ಎಂದು ವಿದ್ಯಾರ್ಥಿಗಳನ್ನು ಹುರಿದುಂಬಿಸಿದ ಪ್ರಕಾಶ್, ಓದಿ ಉನ್ನತ ಸ್ಥಾನಕ್ಕೆ ಹೋದ ನಂತರ ತಂದೆ-ತಾಯಿಗಳನ್ನು ಚೆನ್ನಾಗಿ ನೋಡಿಕೊಳ್ಳದವರು ಎಷ್ಟೇ ಓದಿದ್ದರೂ ಅದು ಕಸಕ್ಕೆ ಸಮಾನ ಎಂದರು.

ದಾವಣಗೆರೆ ಗ್ರಾಮಾಂತರ ಡಿವೈಎಸ್ಪಿ ಬಿ.ಎಸ್.ಬಸವರಾಜ್ ಮಾತನಾಡಿ, ಎನ್ನೆಸ್ಸೆಸ್ ಶಿಬಿರದಲ್ಲಿ ಇಮ್ಮಡಿ ಪುಲಕೇಶಿ ಅವರ ಜಯಂತಿ ಆಚರಣೆ ಮಾಡಿರುವುದಕ್ಕೆ ಸಂತಸ ವ್ಯಕ್ತಪಡಿಸಿದರು.

ಗ್ರಾ.ಪಂ. ಸದಸ್ಯರಾದ ಹೋಬಳಿ ಆನಂದಗೌಡ, ಡಿ.ಎಂ.ಹರೀಶ್, ಪಿಡಿಓ ಕೆ.ಎಸ್.ಉಮೇಶ್ ಮಾತನಾಡಿದರು. ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ರೂಪಾ ಸೋಮಶೇಖರ್ ಅಧ್ಯಕ್ಷತೆ ವಹಿಸಿದ್ದರು.

ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿ.ಆನಂದಪ್ಪ, ಪಿಎಸ್‌ಐ ಮಹೇಶ್ ಪಾಟೀಲ್, ಗ್ರಾ.ಪಂ. ಉಪಾಧ್ಯಕ್ಷ ವೈ.ಚೇತನ್‌ಕುಮಾರ್, ಗ್ರಾ.ಪಂ. ಸದಸ್ಯರಾದ ಕೆ.ಜಿ.ಬಸವರಾಜ್, ಶ್ರೀಮತಿ ಕವಿತಾ ಮಾಕನೂರು ಶಿವು, ಕೆ.ಜಿ. ಮಹಾಂತೇಶ್, ಗ್ರಾ.ಪಂ. ನ ಬಿ.ಮೌನೇಶ್, ವಿ.ಹೆಚ್.ಮೃತ್ಯುಂಜಯ, ಎಸ್‌ಡಿಎಂಸಿ ಅಧ್ಯಕ್ಷ ಬಿ.ಪ್ರಭಾಕರ್, ಮಾಜಿ ಅಧ್ಯಕ್ಷ ಜಿ.ಪಿ.ಹನುಮಗೌಡ, ಶಿಕ್ಷಕ ಬಿ. ರವೀಂದ್ರಚಾರಿ, ಬಾಲ ಕೇಂದ್ರದ ಅಧ್ಯಕ್ಷ ಜಿ.ಆರ್.ಚಂದ್ರಪ್ಪ, ವಿಜಯಭಾಸ್ಕರ್, ಗ್ರಾಮದ ಮುಖಂಡರಾದ ಕೊಟ್ರಯ್ಯ, ನಾಗಸನಹಳ್ಳಿ ಮಹೇಶ್ವರಪ್ಪ, ಬಿಳಸನೂರು ಚಂದ್ರಪ್ಪ, ಪತ್ರಕರ್ತರಾದ ಪ್ರಕಾಶ್, ಕೃಷ್ಣ, ಶಿಬಿರದ ಕಾರ್ಯಕ್ರಮಾಧಿಕಾರಿಗಳಾದ ಡಾ. ಬಿ.ಕೆ.ಮಂಜುನಾಥ್, ಡಾ. ಸಿ. ಚಂದ್ರಶೇಖರ್ ಮತ್ತಿತರರು ಭಾಗವಹಿಸಿದ್ದರು.

## ಸಾಮಾಜಿಕ ಭದ್ರತೆ : ಸಚಿವ ಲಾಡ್

**(1ನೇ ಪುಟದಿಂದ)** ಆಯುವವರು, ಟೈಲರ್ಸ್, ಮೆಕ್ಯಾನಿಕ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕರು ಸೇರಿದಂತೆ 11 ಅಸಂಘಟಿತ ಕಾರ್ಮಿಕರಿಗೆ ಉಚಿತವಾಗಿ ನೋಂದಣಿ ಮಾಡಿಕೊಂಡು, ಗುರುತಿನ ಚೀಟಿ ನೀಡುತ್ತಿದೆ. ಇ-ಶ್ರಮ್ ಪೋರ್ಟ್‌ನಲ್ಲಿ 379 ವಿಧದ ಅಸಂಘಟಿತ ಕಾರ್ಮಿಕರನ್ನು ಉಚಿತವಾಗಿ ನೋಂದಣಿ ಮಾಡಲಾಗುತ್ತಿದೆ.

ರಾಜ್ಯದ ಗಾರ್ಮೆಂಟ್ ಸಂಸ್ಥೆಗಳಲ್ಲಿ ಟೈಲರಿಂಗ್ ವೃತ್ತಿ ಮಾಡುತ್ತಿರುವವರಿಗೆ ಉದ್ಯೋಗಿಯ ಸಂಬಳದ ನಿರ್ದಿಷ್ಟ ಶೇಕಡಾವಾರು ಮೊತ್ತ ಹಾಗೂ ಸಂಸ್ಥೆಯ ಅಷ್ಟೇ ಮೊತ್ತವನ್ನು ಒಟ್ಟು ಮಾಡಿ ಭವಿಷ್ಯ ನಿಧಿಗೆ ಕೊಡುಗೆ ನೀಡುತ್ತಿದ್ದಾರೆ. ಈ ಭವಿಷ್ಯ ನಿಧಿಯನ್ನು ಉದ್ಯೋಗಿಯ ರಾಜೀನಾಮೆ, ನಿವೃತ್ತಿ, ಅನಾರೋಗ್ಯ, ಮದುವೆ, ಶಿಕ್ಷಣ, ನಿವೇಶನ ಖರೀದಿ ಮತ್ತು ಮನೆ ನಿರ್ಮಾಣ ಮುಂತಾದ ಉದ್ದೇಶಗಳಿಗೆ ಹಿಂಪಡೆಯಲು ಅವಕಾಶ ನೀಡಲಾಗಿದೆ ಎಂದರು.

## ಅಪರಿಚಿತ ಪುರುಷನ ಶವ ಪತ್ತೆ

ದಾವಣಗೆರೆ, ಡಿ.5- ದಾವಣಗೆರೆ ಮತ್ತು ತೋಳಹುಣಸೆ ರೈಲು ನಿಲ್ದಾಣಗಳ ಮಧ್ಯೆ ಅಪರಿಚಿತ ವ್ಯಕ್ತಿಯ ಶವ ಸಿಕ್ಕಿದ್ದು, ಸುಮಾರು 35-40 ವರ್ಷದವನಾಗಿದ್ದು, ಸಧೃಡ ಮೈಕಟ್ಟು, ದುಂಡು ಮುಖ, ಗಿಡ್ಡ ಮೂಗು ಹೊಂದಿರುತ್ತಾನೆ. ಮೃತನ ಬಲ ಮೊಣಕೈ ಮೇಲೆ 'ತಂದೆ-ತಾಯಿ ಆಶೀರ್ವಾದ' ಎಂಬ ಹಚ್ಚೆ ಗುರುತು ಇದೆ. ಗ್ರೇ ಬಣ್ಣದ ಕಪ್ಪು ಮತ್ತು ಬಿಳಿ ಬಣ್ಣದ ಅಡ್ಡ ಪಟ್ಟಿ ಇರುವ ಅರ್ಧ ತೋಳಿನ ಟೀ-ಶರ್ಟ್, ಆಕಾಶ ನೀಲಿ ಬಣ್ಣದ ಶಾರ್ಟ್ಸ್, ಕೆಂಪು ಬಣ್ಣದ ಉಡಿದಾರ ಧರಿಸಿರುತ್ತಾನೆ. ಸಂಬಂಧಪಟ್ಟವರು ದಾವಣಗೆರೆ ರೈಲ್ವೆ ಪೊಲೀಸ್ ಠಾಣೆ (ದೂರ ವಾಣಿ 08192-259643 ಅಥವಾ 94808 00469, 94808 02123 ಅಥವಾ ಪೊಲೀಸ್ ಕಂಟ್ರೋಲ್ ರೂಂ ದೂರವಾಣಿ : 080-22871291) ಯನ್ನು ಸಂಪರ್ಕಿಸಬಹುದು.


॥ ಶ್ರೀ ಆಂಜನೇಯ ಸ್ವಾಮಿ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ**



ದಾವಣಗೆರೆ ಜಿ॥, ತಾ॥ ಗೋಣಿವಾಡ ಗ್ರಾಮದ ವಾಸಿ

**ಗೌಡ್ರು ಶ್ರೀಮತಿ ಕಲ್ಲಮ್ಮ ದಿ॥ ಕೊಟ್ರೇಶಪ್ಪ** ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 02.12.2023 ನೇ ಶನಿವಾರ ಬೆಳಗಿನ ಜಾವ 2.30ಕ್ಕೆ ನನ್ನ ಮಗನಾದ

**ಶ್ರೀ ಜಿ.ಕೆ. ಪ್ರಕಾಶ್‌ರವರು**

ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **"ಕೈಲಾಸ ಶಿವಗಣಾರಾಧನೆ"**ಯನ್ನು ದಿ. : 6.12.2023ನೇ ಬುಧವಾರ ಬೆಳಿಗ್ಗೆ 10.30ಕ್ಕೆ ಗೋಣಿವಾಡ ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ತಾಯಿ : **ಗೌಡ್ರು ಶ್ರೀಮತಿ ಕಲ್ಲಮ್ಮ ದಿ॥ ಕೊಟ್ರೇಶಪ್ಪ**

ಧರ್ಮಪತ್ನಿ : **ಶ್ರೀಮತಿ ಲತಾ**, ಮಕ್ಕಳಾದ : **ಚೇತನ್ ಜಿ.ಪಿ., ತನ್ಮಯ್ ಜಿ.ಪಿ.**

ಅಣ್ಣ-ಅತ್ತಿಗೆ : **ಶ್ರೀಮತಿ ಭಾರತಿ ಶ್ರೀ ಜಿ.ಕೆ. ಕೆಂಚಪ್ಪ ಮತ್ತು ಮಕ್ಕಳು**

**ಗೌಡ್ರು ವಂಶಸ್ಥರು ಹಾಗೂ ಗೋಣಿವಾಡ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.**

ಫೋ. : 9448070906, 7259882411

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ



**ಶ್ರೀ ಸಿದ್ದರಾಮಯ್ಯ**
ಸನ್ಮಾನ್ಯ ಮುಖ್ಯಮಂತ್ರಿಗಳು



**ಶ್ರೀ ಡಿ.ಕೆ. ಶಿವಕುಮಾರ್**
ಮಾನ್ಯ ಉಪಮುಖ್ಯಮಂತ್ರಿಗಳು

# 67ನೇ ಮಹಾಪರಿನಿರ್ವಾಣ ದಿನ



ಭಾರತರತ್ನ, ಸಂವಿಧಾನ ಶಿಲ್ಪಿ **ಡಾ. ಬಿ.ಆರ್. ಅಂಬೇಡ್ಕರ್** ರವರ
**ಪ್ರತಿಮೆಗೆ ಮಾಲಾರ್ಪಣೆ ಮತ್ತು ಗೌರವ ಸಮರ್ಪಣೆ**

ಸನ್ಮಾನ್ಯ ಮುಖ್ಯಮಂತ್ರಿಗಳಾದ
**ಶ್ರೀ ಸಿದ್ದರಾಮಯ್ಯ**
ಮತ್ತು
ಮಾನ್ಯ ಸಮಾಜ ಕಲ್ಯಾಣ ಸಚಿವರಾದ
**ಡಾ. ಹೆಚ್. ಸಿ. ಮಹದೇವಪ್ಪ**
ಅವರಿಂದ

ಡಿಸೆಂಬರ್ 6, 2023, ಬುಧವಾರ ಬೆಳಿಗ್ಗೆ 9.00 ಗಂಟೆಗೆ
ಸ್ಥಳ: ವಿಧಾನಸೌಧದ ಮುಂಭಾಗ (ಪೂರ್ವ ದ್ವಾರ), ಬೆಂಗಳೂರು

**"ವಿದ್ಯಾವಂತರಾಗಿ, ಸಂಘಟಿತರಾಗಿ ಮತ್ತು ಉತ್ತೇಜಿತರಾಗಿರಿ....!"**

-ಡಾ. ಬಿ.ಆರ್. ಅಂಬೇಡ್ಕರ್



**ಡಾ. ಹೆಚ್.ಸಿ. ಮಹದೇವಪ್ಪ,**
ಮಾನ್ಯ ಸಮಾಜ ಕಲ್ಯಾಣ ಸಚಿವರು
ಸಭೆಯೊಂದನ್ನು ಉದ್ದೇಶಿಸಿ ಮಾತನಾಡುತ್ತಿರುವುದು.

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು" -ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

CMofKarnataka https://dipr.karnataka.gov.in/

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗಗಳ ಮಾಲೀಕತ್ವ ಮತ್ತು ಸಂಪಾದಕತ್ವದ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು

ಕರ್ನಾಟಕ ವಾರ್ತೆ

# ಸದೃಢ ಆರೋಗ್ಯಕ್ಕೆ ಯೋಗ ಮದ್ದು



ದಾವಣಗೆರೆ, ಡಿ. 5 - ಸದೃಢ ಆರೋಗ್ಯ ಪಡೆಯಲು ಯೋಗಾಭ್ಯಾಸ ಒಂದೇ ಮಾರ್ಗವಾಗಿದ್ದು, ವಯಸ್ಸಿನ ಮಿತಿಯಿಲ್ಲದೇ ಪ್ರತಿಯೊಬ್ಬರು ಯೋಗ ಮಾಡಿ ಆರೋಗ್ಯ ಕಾಪಾಡಿಕೊಳ್ಳಬೇಕೆಂದು ಯೋಗ ಗುರು ಎನ್.ಪರಶುರಾಮಪ್ಪ ಕಿವಿಮಾತು ಹೇಳಿದರು.

ನಗರದ ಎಸ್‌ಎಎಸ್‌ಎಸ್ ಯೋಗ ಫೆಡರೇಷನ್ ಕೇಂದ್ರದಲ್ಲಿ ನಿನ್ನೆ ಆಯೋಜಿಸಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರತಿನಿತ್ಯ ಯೋಗಾಭ್ಯಾಸ ಮಾಡಿದರೆ, ಜೀವನೋತ್ಸಹ ಹೆಚ್ಚಾಗುತ್ತದೆ. ಅಷ್ಟೇ ಅಲ್ಲದೇ, ಮನುಷ್ಯನ ಜಂಜಾಟದ ಜೀವನದಲ್ಲಿ ಸದಾ ಲವಲವಿಕೆಯಿಂದಿರಲು ಯೋಗ ಮದ್ದಾಗಿದೆ ಎಂದು ಸಲಹೆ ನೀಡಿದರು.

ಯೋಗ ಈಗ ಅಂತರರಾಷ್ಟ್ರೀಯ ಕ್ರೀಡಾ ಸ್ಥಾನಮಾನ ಹೊಂದಿದ್ದು, ಪ್ರತಿಯೊಬ್ಬರೂ ಯೋಗ ಕರಗತ ಮಾಡಿಕೊಂಡು, ಸ್ಪರ್ಧೆಗಳಲ್ಲಿ ಭಾಗವಹಿಸಿ ಚಿನ್ನ, ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ಪಡೆಯುವ ಜೊತೆಗೆ ಅತ್ಯುತ್ತಮ ಕ್ರೀಡಾಪಟುಗಳಾಗಿ ತಾಲ್ಲೂಕು, ಜಿಲ್ಲಾ, ರಾಜ್ಯ, ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಬಹುದು ಎಂದು ಯೋಗ ಪಟುಗಳಿಗೆ ಆತ್ಮಸ್ಥೈರ್ಯ ತುಂಬಿದರು.

ಈ ಸಂದರ್ಭಗಳಲ್ಲಿ ಎಸ್ ಎಎಸ್ ಎಸ್ ಯೋಗ ಫೆಡರೇಷನ್ ವತಿಯಿಂದ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಎಸ್.ಪಿ.ಗೀತಾ, ಮಹಾನಗರ ಪಾಲಿಕೆಯ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನ ರಾಗಿರುವ ಲಾವಣ್ಯ ಶ್ರೀಧರ್, ರಾಜ್ಯ ಮಟ್ಟದ ಡಾನ್ಸ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ ಕುಮಾರಿ ಅನುಷ್ಕಾ ಅವರುಗಳನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಯೋಗ ಫೆಡರೇಷನ್‌ನ ಅಧ್ಯಕ್ಷ ರಾಜಣ್ಣ, ಉಪಾಧ್ಯಕ್ಷ ಎಂ.ಎನ್.ಗೋಪಾಲ್ ಸ್ವಾಮಿ, ಗುರುಸ್ವಾಮಿ, ಖಜಾಂಚಿ ಎಸ್.ರಾಜಶೇಖರ್, ನಿರ್ದೇಶಕರಾದ ಪಿ.ಅಜ್ಜಯ್ಯ, ರಾಘವೇಂದ್ರ ಎನ್. ಚೌವ್ಹಾಣ್ ಸೇರಿದಂತೆ, ಇನ್ನಿತರರಿದ್ದರು.

# ಮತಯಂತ್ರಕ್ಕೂ ಇಸ್ರೇಲಿ ಸಂಬಂಧ !

ನವದೆಹಲಿ, ಡಿ. 5 – ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಮತಯಂತ್ರ ಗಳನ್ನು ತಿರುಚಲಾಗಿದೆ. ಇದರಲ್ಲಿ ಇಸ್ರೇಲಿ ತಂತ್ರಜ್ಞಾನ ಬಳಕೆಯಾಗಿರುವ ಬಗ್ಗೆ ತನಿಖೆ ನಡೆಸಬೇಕು ಎಂದು ತೃಣಮೂಲ ಕಾಂಗ್ರೆಸ್ ನಾಯಕ ಸೌಗತ ರಾಯ್ ಒತ್ತಾಯಿಸಿದ್ದಾರೆ.

ದೂರವಾಣಿ ಮೂಲಕ ಮತಯಂತ್ರ ಗಳನ್ನು ತಿರುಚಬಹುದು ಎಂದು ಹಲವು ಪ್ರತಿ ಪಕ್ಷಗಳು ಹೇಳಿದ್ದವು. ಅಲ್ಲದೇ, ಇಸ್ರೇಲಿ ತಂತ್ರ ಜ್ಞಾನವೊಂದು ಈ ವಿಷಯದಲ್ಲಿ ಪ್ರಶ್ನಾರ್ಹ ವಾಗಿದೆ. ಕೇಂದ್ರ ಸರ್ಕಾರ ಇತ್ತೀಚೆಗೆ ಹಮಾಸ್ ವಿರುದ್ಧ ನಡೆದ ಸಂಘರ್ಷದಲ್ಲಿ ಇಸ್ರೇಲ್ ಪರ ನಿಲುವು ತಳೆದಿದೆ. ಈ ಬಗ್ಗೆ ಸಂಪೂರ್ಣ ತನಿಖೆಯಾಗಬೇಕು ಎಂದವರು ಹೇಳಿದ್ದಾರೆ.

ಹಲವು ರಾಜ್ಯಗಳಲ್ಲಿ ತುಂಬಾ ಅಚ್ಚರಿಯ ಫಲಿತಾಂಶಗಳು ಬಂದಿವೆ. ಇದು ಮತಯಂತ್ರ ಗಳ ಅನುಮಾನಕ್ಕೆ ಕಾರಣವಾಗಿದೆ ಎಂದವರು ಹೇಳಿದ್ದಾರೆ. ಆದರೆ, ಈ ಬಗ್ಗೆ ಪ್ರತಿಪಕ್ಷಗಳಿಗಿಂತ ಭಿನ್ನ ನಿಲುವು ತಳೆದಿರುವ ಕಾಂಗ್ರೆಸ್ ಸಂಸದ ಕಾರ್ತಿ ಚಿದಂಬರಂ, ಮತಯಂತ್ರಗಳ ಮೇಲೆ ನನಗೆ ವಿಶ್ವಾಸ ಇದೆ ಎಂದಿದ್ದಾರೆ.

ಮತಯಂತ್ರಗಳ ಕುರಿತು ನನ್ನ ವೈಯಕ್ತಿಕ ನಿಲುವು ಬದಲಾಗಿಲ್ಲ. ನನ್ನ ಪಕ್ಷದ ಸಹೋ ದ್ಯೋಗಿಗಳು ಭಿನ್ನ ನಿಲುವು ಹೊಂದಿರ ಬಹುದು. ಆದರೆ, ನನಗೆ ಈ ಯಂತ್ರಗಳ ಮೇಲೆ ತುಂಬಾ ವಿಶ್ವಾಸ ಇದೆ ಎಂದಿದ್ದಾರೆ.

# ಪಾರದರ್ಶಕ, ನ್ಯಾಯಸಮ್ಮತ ವ್ಯಾಪಾರ, ವಹಿವಾಟಿಗೆ ರೈತ ಒಕ್ಕೂಟದ ಒತ್ತಾಯ



ದಾವಣಗೆರೆ, ಡಿ. 5- ಸೂಕ್ತ ಪಾರದರ್ಶಕ, ನ್ಯಾಯಯುತ ವ್ಯಾಪಾರ ವಹಿವಾಟು ನಡೆಸಲು ಕ್ರಮ ಕೈಗೊಳ್ಳುವಂತೆ ರೈತ ಒಕ್ಕೂಟದ ಪದಾಧಿಕಾರಿಗಳು ಜಿಲ್ಲಾಧಿಕಾರಿ ಹಾಗೂ ಎಪಿಎಂಸಿ ಆಡಳಿತಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಭದ್ರಾ ನೀರಿನ ತಾಪತ್ರಯದ ನಡುವೆಯೂ ರೈತರು ಬಹಳ ಕಷ್ಟಪಟ್ಟು ಭತ್ತ ಬೆಳೆದಿದ್ದಾರೆ.ಆದರೆ ಭತ್ತ ಖರೀದಿದಾರರ ಬೆಲೆ ನಿಯಂತ್ರಣ, ಕುತಂತ್ರಗಳಿಂದ ರೈತರು ರೋಸಿ ಹೋಗಿದ್ದಾರೆ.

ಆದ್ದರಿಂದ ತಾವು ವ್ಯಾಪಾರಸ್ಥರ, ಖರೀದಿದಾರರ, ದಲಾಲರ ಮತ್ತು ರೈತರ ಸಭೆ ಕರೆದು ಕೂಲಂಕುಶವಾಗಿ ಸಮಸ್ಯೆಗಳ ಬಗ್ಗೆ ಚರ್ಚಿಸಿ, ಪಾರದರ್ಶಕ, ನ್ಯಾಯಸಮ್ಮತ ವ್ಯಾಪಾರ-ವಹಿವಾಟು ನಡೆಸಲು ಕ್ರಮಕ್ಕೆ ಮುಂದಾಗುವಂತೆ ಜಿಲ್ಲಾಧಿಕಾರಿಗಳನ್ನು ರೈತ ಒಕ್ಕೂಟದ ಮುಖಂಡರು ಒತ್ತಾಯಿಸಿದರು.

ವೇಮೆಂಟ್ ಮತ್ತು ಪೇಮೆಂಟ್ ಅಂತಾ ಕಂಡೀಷನ್ ಮಾಡಿದ್ದರು. ವಾರಗಟ್ಟಲೇ ಹಣ ನೀಡದೇ ಸತಾಯಿಸುತ್ತಾರೆ, ಇದು ಅಕ್ಷಮ್ಯ ಅಪರಾಧ. ಖರೀದಿದಾರರ ಇಂತಹ ಕುತಂತ್ರ ಧೋರಣೆ ಸಂಪೂರ್ಣ ನಿಲ್ಲಬೇಕು. ವೇಮೆಂಟ್, ಪೇಮೆಂಟ್ ಪದ್ಧತಿ ಬದಲು ಲೋಡಿಂಗ್ ಪೇಮೆಂಟ್ ಅಥವಾ ಸ್ಪಾಟ್ ಪೇಮೆಂಟ್ ಪದ್ಧತಿ ಕಡ್ಡಾಯವಾಗಿ ಜಾರಿಯಾಗಬೇಕೆಂದರು.

ಖಾಲಿ ಚೀಲ ತೂಕಕ್ಕೆ ಒಂದು ಕೆಜಿ ಶ್ಯೂಟ್ ಜೊತೆಗೆ ಇನ್ನೊಂದು ಕೆಜಿ ಹೆಚ್ಚುವರಿಯಾಗಿ ಪಡೆಯುತ್ತಾರೆ. ಇದು ಸರಿಯಲ್ಲ. ಮೋಸ, ಚೀಲದ ತೂಕಕ್ಕೆ ಮಾತ್ರ ಒಟ್ಟು ತೂಕದಲ್ಲಿ ಕಡಿತಗೊಳಿಸಿ ಲೆಕ್ಕ ಹಾಕಿ ಪೇಮೆಂಟ್ ಮಾಡಬೇಕು.

ಹಮಾಲ ಕೂಲಿ ಸಂಪೂರ್ಣ ಖರೀದಿದಾರರೇ ನೀಡಬೇಕು. ರೈತರ ಹಣದಲ್ಲಿ ಕಡತಗೊಳಿಸಬಾರದು. ಹಮಾಲರು ಸ್ಯಾಂಪಲ್ ಕಾಳು ಕೊಡಬೇಕೆಂದು ರೈತರನ್ನು ಒತ್ತಾಯಿಸಬಾರದು. ರೈತರು ಸಹ ಅವರ ಒತ್ತಾಯಕ್ಕೆ ಮಣಿದು ಒಂದು ಕಾಳನ್ನೂ ಸಹ ಕೊಡಬಾರದು ಎಂದು ಆಗ್ರಹಿಸಿದರು.

ಡಿಸ್ಕೌಂಟ್ ಪದ್ಧತಿ ಕಡ್ಡಾಯವಾಗಿ ರದ್ದಾಗಬೇಕು. ಭತ್ತದ ಬೆಲೆ ಹೆಚ್ಚಾಗುತ್ತಿರುವುದರಿಂದ ರೈತರು ಒಂದು ಕಾಳನ್ನು ಉಳಿಸಿಕೊಳ್ಳಬೇಕು. ಖರೀದಿದಾರರ ಕುತಂತ್ರಗಳನ್ನು ಸಮರ್ಥವಾಗಿ ಎದುರಿಸಬೇಕೆಂದು ಸಲಹೆ ನೀಡಿದರು.

ರೈತ ಒಕ್ಕೂಟದ ಪದಾಧಿಕಾರಿಗಳಾದ ಕೋಳೇನಹಳ್ಳಿ ಬಿ.ಎಂ. ಸತೀಶ್, ಮಾಜಿ ಮೇಯರ್ ಹೆಚ್.ಎನ್. ಗುರುನಾಥ್, ವಾಸನ ಬಸವರಾಜ್, ಅಣಬೇರು ಶಿವಪ್ರಕಾಶ್ ಮುಂತಾದವರು ಉಪಸ್ಥಿತರಿದ್ದರು.

# ನಗರದಲ್ಲಿ ವಿಶ್ವ ಏಡ್ಸ್ ಅರಿವು ಜಾಥಾ




ದಾವಣಗೆರೆ, ಡಿ.5- ವಿಶ್ವ ಏಡ್ಸ್ ದಿನಾಚರಣೆ ಅಂಗವಾಗಿ ನಗರದ ಚರ್ಮ ವೈದ್ಯರ ಸಂಘ ಹಾಗೂ ಜೆಜೆಎಂ ಮೆಡಿಕಲ್ ಕಾಲೇಜು, ಎಸ್‌ಎಸ್ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ ಅಂಡ್ ರಿಸರ್ಚ್ ಸೆಂಟರ್ ಇವರುಗಳ ಸಂಯುಕ್ತಾಶ್ರಯದಲ್ಲಿ ಏಡ್ಸ್ ಬಗ್ಗೆ ಅರಿವು ಮೂಡಿಸುವ ದೂರದ ನಡಿಗೆಯನ್ನು ನಿನ್ನೆ ನಡೆಸಲಾಯಿತು.

ಡಿಸೆಂಬರ್ 1 ರಂದು ವಿಶ್ವ ಆರೋಗ್ಯ ಸಂಸ್ಥೆಯು 'ವಿಶ್ವ ಏಡ್ಸ್ ದಿನಾಚರಣೆ' ಆಚರಿಸುತ್ತದೆ. ಪ್ರತಿ ವರ್ಷ, ಒಂದೊಂದು ವಿಶಿಷ್ಟ ಧ್ಯೇಯದೊಂದಿಗೆ ಈ ದಿನವನ್ನು ಆಚರಿಸಲಾಗುತ್ತದೆ. ವಿಶ್ವ ಏಡ್ಸ್ ದಿನ 2023ರ ಧ್ಯೇಯ 'ಸಮುದಾಯಗಳು ಮುನ್ನಡೆಸಲಿ' ಅಂದರೆ ಎಚ್‌ಐವಿ/ ಏಡ್ಸ್ ಒಂದು ಜಾಗತಿಕ ಆರೋಗ್ಯ ಸವಾಲಾಗಿರುವು ದರಿಂದ ಸಮುದಾಯದ ಜನರು ಅದನ್ನು ಕೊನೆಗೊಳಿಸಲು ಒಗ್ಗಟ್ಟಾಗಿ ಮುಂದಾಗಬೇಕೆಂಬುದು ದಿನಾಚರಣೆ ಉದ್ದೇಶ ವಾಗಿದೆ.

ಈ ನಡಿಗೆಯಲ್ಲಿ ತಜ್ಞ ವೈದ್ಯರುಗಳಾದ ಡಾ. ಬಿ.ಕೆ ವಿಶ್ವನಾಥ್, ಡಾ.ಸೂಗಾರೆಡ್ಡಿ, ಡಾ. ಮಂಜುನಾಥ್ ಹುಲ್ಮನಿ, ಡಾ. ಎಂ.ಸಿ. ರೂಪ, ಪ್ರಾಧ್ಯಾಪಕರಾದ ಡಾ. ಎಚ್.ಸಿ. ಮಂಗಳ, ಡಾ. ಬಿ. ರಶ್ಮಿ, ಡಾ.ಮಧು, ಡಾ. ಡಿ. ಜಿ. ವಿನಯ್, ಡಾ.ಮಲ್ಲಿಕಾರ್ಜುನ್, ಡಾ.ಅಕ್ಷಯ್ ಮತ್ತಿತರರು ಭಾಗವಹಿಸಿದ್ದರು.

# ಜಿಗಳಿಯಲ್ಲಿ ಕನಕದಾಸರ ಜಯಂತಿ ಆಚರಣೆ



ಮಲೇಬೆನ್ನೂರು, ಡಿ.5- ಜಿಗಳಿ ಗ್ರಾ.ಪಂ. ಕಚೇರಿ ಮತ್ತು ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ದಾಸಶ್ರೇಷ್ಠ ಸಂತ ಶ್ರೀ ಭಕ್ತ ಕನಕದಾಸರ ಜಯಂತಿಯನ್ನು ಸಂಭ್ರಮದಿಂದ ಆಚರಿಸಲಾಯಿತು.

ಶಾಲೆಯಲ್ಲಿ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಶಿಕ್ಷಕ ಮಲ್ಲಿಕಾರ್ಜುನ್ ಅವರು ಕನಕದಾಸರ ಕುರಿತು ವಿವರವಾಗಿ ತಿಳಿಸಿದರು. ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿ. ಆನಂದಪ್ಪ, ಎಸ್‌ಡಿಎಂಸಿ ಅಧ್ಯಕ್ಷ ಬಿ.ಪ್ರಭಾಕರ್, ಮಾಜಿ ಅಧ್ಯಕ್ಷ ಎಕ್ಕೆಗೊಂದಿ ರುದ್ರಗೌಡ ಮಾತನಾಡಿದರು.

ಗ್ರಾ.ಪಂ. ಅಧ್ಯಕ್ಷರಾದ ಶ್ರೀಮತಿ ರೂಪಾ ಸೋಮಶೇಖರ್, ಉಪಾಧ್ಯಕ್ಷ ಎಕ್ಕೆಗೊಂದಿ ಚೇತನ್‌ಕುಮಾರ್, ಸದಸ್ಯರಾದ ಡಿ.ಎಂ. ಹರೀಶ್, ಕೆ.ಜಿ. ಬಸವರಾಜ್, ಶ್ರೀಮತಿ ಆಶಾ ಅಣ್ಣಪ್ಪ, ಹೋಬಳಿ ಆನಂದಗೌಡ, ಶ್ರೀಮತಿ ಜಯಮ್ಮ ಬಿ.ಕೆ.ರಂಗನಾಥ್, ಕೆ.ಜಿ.ಮಹಾಂತೇಶ್, ಪಿ.ಹೆಚ್.ದೇವರಾಜ್, ಗ್ರಾ.ಪಂ. ಮಾಜಿ ಅಧ್ಯಕ್ಷರಾದ ಬಿ.ಎಂ.ದೇವೇಂದ್ರಪ್ಪ, ಎಂ.ವಿ. ನಾಗರಾಜ್, ಎಸ್‌ಡಿಎಂಸಿ ಮಾಜಿ ಅಧ್ಯಕ್ಷರಾದ ಜಿ. ಪಿ.ಹನುಮಗೌಡ, ಜಿ.ಆರ್.ಚಂದ್ರಪ್ಪ, ಟಿ.ಎಸ್.ರಾಮಪ್ಪ, ಪೂಜಾರ್ ನಾಗರಾಜ್, ಎಂ.ಜಯಣ್ಣ, ಪತ್ರಕರ್ತ ಪ್ರಕಾಶ್, ಎಸ್‌ಡಿಎಂಸಿ ಸದಸ್ಯರಾದ ವಿಜಯ ಭಾಸ್ಕರ್, ಟಿ.ನಾಗರಾಜ್, ಶೀಲ ಹನುಮಂತಪ್ಪ, ಪಿಡಿಓ ಕೆ.ಎಸ್. ಉಮೇಶ್, ಕಾರ್ಯದರ್ಶಿ ಸುಜಾತ, ಶಾಲಾ ಮುಖ್ಯ ಶಿಕ್ಷಕ ಜಿ.ನಾಗೇಶ್, ಶಿಕ್ಷಕರಾದ ದೀಪಾ, ಕರಿಬಸಮ್ಮ, ಲಿಂಗರಾಜ್, ಗುಡ್ಡಪ್ಪ, ಶ್ರೀನಿವಾಸ್ ರೆಡ್ಡಿ ಮತ್ತಿತರರು ಭಾಗವಹಿಸಿದ್ದರು.

# ಸಭಾಧ್ಯಕ್ಷ - ರಾಯರೆಡ್ಡಿ ನಡುವೆ ಜಟಾಪಟಿ

ಬೆಳಗಾವಿ, ಡಿ. 5 – ಶೂನ್ಯವೇಳೆ ಯನ್ನು ನಿಗದಿತ ಅವಧಿಗಿಂತಲೂ ಹೆಚ್ಚು ಕಾಲ ನಡೆಸಿದ ಬಗ್ಗೆ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಹಾಗೂ ಕಾಂಗ್ರೆಸ್ ಹಿರಿಯ ಶಾಸಕ ಬಸವರಾಜ ರಾಯರೆಡ್ಡಿ ಅವರ ನಡುವೆ ವಾಗ್ವಾದ ನಡೆದು, ರಾಯ ರೆಡ್ಡಿ ಸಭಾತ್ಯಾಗ ಮಾಡಿದ ಘಟನೆ ನಡೆದಿದೆ. ಶೂನ್ಯ ವೇಳೆ ನಿಗದಿತ ಅವಧಿಗಿಂತ ವಿಳಂಬವಾಗಿದೆ ಎಂದು ಆಕ್ಷೇಪಿಸಿದ ಶಾಸಕ ರಾಯರೆಡ್ಡಿ, ನಿಯಮಗಳ ಪುಸ್ತಕವನ್ನು ಪಾಲಿಸದೇ ಇದ್ದರೆ ಅದನ್ನು ಹರಿದು ಹಾಕಿ ಎಂದು ವಿಧಾನಸಭಾಧ್ಯಕ್ಷರಿಗೆ ಹೇಳಿದರು.

ಇದಕ್ಕೆ ಉತ್ತರಿಸಿದ ಖಾದರ್, ನೀವೇ ಒಂದು ಗಂಟೆ ತಡವಾಗಿ ಬಂದಿದ್ದೀರಿ. ಈಗ ನನಗೆ ಬೋಧನೆ ಮಾಡುತ್ತಿದ್ದೀರಿ. ದಯವಿಟ್ಟು ಕುಳಿತುಕೊಳ್ಳಿ ಎಂದರು. ಇದರಿಂದ ಅಸಮಾಧಾನಗೊಂಡ ರಾಯ ರೆಡ್ಡಿ, ಸಭಾತ್ಯಾಗ ಮಾಡಿದರು. ಇದಕ್ಕೆ ಹೆಚ್ಚು ಗಮನ ಹರಿಸದ ಸಭಾಧ್ಯಕ್ಷರು, ಕಲಾಪ ಮುಂದುವರೆಸಿದರು.

# ಜಿಗಳಿ : ಇಂದು ಆರೋಗ್ಯ ತಪಾಸಣೆ

ಜಿಗಳಿ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಪ್ರಾಥಮಿಕ ಶಾಲೆಯ ಆವರಣ ದಲ್ಲಿ ನಡೆಯುತ್ತಿರುವ ಹರಿಹರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಎನ್‌ಎಸ್‌ಎಸ್ ಶಿಬಿರದಲ್ಲಿ ಗ್ರಾಮಸ್ಥರಿಗೆ ಇಂದು ಬೆಳಿಗ್ಗೆ 10 ರಿಂದ ಹೊಳೆ ಸಿರಿಗೆರೆಯ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಮಲೇಬೆನ್ನೂರಿನ ಅಪೂರ್ವ ಆಸ್ಪತ್ರೆ ವತಿಯಿಂದ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಶಿಬಿರ ಕಾರ್ಯಕ್ರಮಾಧಿ ಕಾರಿಗಳಾದ ಬಿ.ಕೆ.ಮಂಜುನಾಥ್, ಡಾ.ಸಿ. ಚಂದ್ರಶೇಖರ್ ತಿಳಿಸಿದ್ದಾರೆ.

# ಹರಿಹರ ತಾಲ್ಲೂಕು ಮಾದಿಗ ಸಮಾಜ ಸಂಘದ ಅಧ್ಯಕ್ಷರಾಗಿ ಆನಂದ್




ಹರಿಹರ, ಡಿ. 5- ಹರಿಹರ ತಾಲ್ಲೂಕು ಮಾದಿಗ ಸಮಾಜದ ವತಿಯಿಂದ ಸಮಾಜಮುಖಿ ಕಾರ್ಯಕ್ರಮ ಗಳನ್ನು ಹಮ್ಮಿಕೊಳ್ಳುವ ಹಿನ್ನೆಲೆಯಲ್ಲಿ ಸಮಿತಿಗೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ ಎಂದು ಸಮಾಜದ ಅಧ್ಯಕ್ಷ ಎಂ.ಎಸ್. ಆನಂದಕುಮಾರ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಸಂಘದ ಗೌರವ ಅಧ್ಯಕ್ಷರಾಗಿ ಎಲ್.ಬಿ. ಹನುಮಂತಪ್ಪ, ಅಧ್ಯಕ್ಷರಾಗಿ ಎಂ.ಎಸ್. ಆನಂದ್, ಕಾರ್ಯಾಧ್ಯಕ್ಷರಾಗಿ ಜಿ.ಹೆಚ್. ಸಿದ್ಧರೂಢ, ಉಪಾಧ್ಯಕ್ಷರಾಗಿ ಹನುಮಂತಪ್ಪ ದೊಡ್ಡಮನೆ, ಪಿ.ಎನ್ ವಿರುಪಾಕ್ಷಪ್ಪ, ಎಂ.ಎಸ್ ಶ್ರೀನಿವಾಸ್, ಕಾರ್ಯದರ್ಶಿ ಹೆಚ್. ಶಿವಪ್ಪ, ಖಜಾಂಚಿ ಎ. ಪರಶುರಾಮ್, ನಿರ್ದೇಶಕರಾಗಿ ಬಿ.ಡಿ. ಬಸವರಾಜಪ್ಪ, ಹೆಚ್.ಎಂ. ಹನುಮಂತಪ್ಪ, ಎ.ಕೆ. ನಾಗೇಂದ್ರಪ್ಪ, ಆರ್. ಮಂಜುನಾಥ್, ಎನ್.ಕೆ. ಪ್ರಕಾಶ್, ಚೌಡಪ್ಪ ಮೇಗಳಮನೆ, ಎ.ಕೆ. ದಾಸಪ್ಪ ಅವರನ್ನು ನೇಮಿಸಲಾಗಿದೆ ಎಂದು ಹೇಳಿದರು.

ಸಮಾಜವನ್ನು ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿ ಮುಂದೆ ತರುವ ನಿಟ್ಟಿನಲ್ಲಿ ಈಗಾಗಲೇ ಹಲವಾರು ರೀತಿಯ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಜೊತೆಗೆ ಕಳೆದ ಬಾರಿ 12 ಜೊತೆ ಸಾಮೂಹಿಕ ವಿವಾಹ ಮಹೋತ್ಸವ ಮಾಡಲಾಗಿದೆ. ಆ ಮೂಲಕ ಸಮಾಜದ ಶೋಷಿತರ ಬದುಕಿಗೆ ಸಂಘವು ಸೇವೆ ಸಲ್ಲಿಸುತ್ತಾ ಬಂದಿದ್ದು, ಈ ಬಾರಿ ಕೂಡ ಸಾಮೂಹಿಕ ವಿವಾಹ ಮಹೋತ್ಸವ ಆಚರಣೆ ಮಾಡಬೇಕೆಂಬ ಉದ್ದೇಶದಿಂದ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ ಎಂದು ಆನಂದಕುಮಾರ್ ತಿಳಿಸಿದರು. ಗೌರವ ಅಧ್ಯಕ್ಷ ಎಲ್.ಬಿ. ಹನುಮಂತಪ್ಪ ಮಾತನಾಡಿದರು.

ಈ ಸಂದರ್ಭದಲ್ಲಿ ಕಾರ್ಯಾಧ್ಯಕ್ಷ ಜಿ.ಹೆಚ್. ಸಿದ್ಧಾರೂಢ, ಕಾರ್ಯದರ್ಶಿ ಹೆಚ್. ಶಿವಪ್ಪ, ಉಪಾಧ್ಯಕ್ಷ ಎಂ.ಎಸ್. ಶ್ರೀನಿವಾಸ್, ನಿರ್ದೇಶಕ ನಾಗೇಂದ್ರಪ್ಪ ರಾಜನಹಳ್ಳಿ ಇತರರು ಹಾಜರಿದ್ದರು.

# ಪೊಲೀಸ್ ಇಲಾಖೆಯ 1,700 ವಾಹನಗಳನ್ನು ನಿರುಪಯುಕ್ತಗೊಳಿಸಲು ತೀರ್ಮಾನ

ಬೆಳಗಾವಿ, ಡಿ. 5 - ಪೊಲೀಸ್ ಇಲಾಖೆಯಲ್ಲಿ 1700ಕ್ಕೂ ಹೆಚ್ಚು ವಾಹನಗಳನ್ನು ಸ್ಕ್ರ್ಯಾಪ್‌ಗೊಳಿಸಲು (ನಿರುಪಯುಕ್ತ) ತೀರ್ಮಾನಿಸಲಾಗಿದೆ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ವಿಧಾನಸಭೆಯಲ್ಲಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಜೆ.ಹೆಚ್. ಶ್ರೀನಿವಾಸ್ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಹಂತ ಹಂತವಾಗಿ ಅವುಗಳನ್ನು ನಿರುಪಯುಕ್ತಗೊಳಿಸಲಾಗುವುದು. 100 ಕೋಟಿ ರೂ. ವೆಚ್ಚದಲ್ಲಿ ಹೊಸದಾಗಿ ವಾಹನಗಳನ್ನು ಖರೀದಿಸಲು ಉದ್ದೇಶಿಸಲಾಗಿದೆ ಎಂದರು.

ಅಗ್ನಿಶಾಮಕ ಠಾಣೆ ಮತ್ತು ತುರ್ತು ಸೇವಾ ಇಲಾಖೆಯಲ್ಲಿ 15 ವರ್ಷಗಳ ಹಳೆಯ ವಾಹನಗಳನ್ನು ಅನುಪಯುಕ್ತಗೊಳಿಸುವ ಹಾಗೂ ಬದಲಿಗೆ ಹೊಸ ವಾಹನಗಳನ್ನು ಖರೀದಿಸಲು ಅನುಮತಿ ನೀಡುವ ಸಂಬಂಧ ಸರ್ಕಾರದ ಪ್ರಧಾನಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ ಎಂದರು.

ಅವಧಿ ಮೀರಿದ ಮತ್ತು ಸುಸ್ಥಿತಿಯಲ್ಲಿರುವ ವಾಹನಗಳನ್ನು ನಿರುಪಯುಕ್ತಗೊಳಿಸಿದಲ್ಲಿ ಇಲಾಖೆಯ ಮೂಲ ಚಟುವಟಿಕೆಗಳಿಗೆ ತೊಂದರೆಯಾಗುವುದರಿಂದ ವಾಹನಗಳ ನೋಂದಣಿ ಪತ್ರವನ್ನು ನವೀಕರಿಸಲು ಕೇಂದ್ರ ಸರ್ಕಾರದ ಅನುಮತಿ ಪಡೆಯಲು ನಿರ್ಣಯ ಕೈಗೊಳ್ಳಲಾಗಿದ್ದು, ಅನುಮತಿ ಕೋರಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಅನುಮತಿಯ ನಿರೀಕ್ಷಣೆಯಲ್ಲಿದ್ದೇವೆ ಎಂದರು.

# ಸರ್ಕಾರದ ಗೋಧಿ ನೀತಿಗೆ ಕಾಂಗ್ರೆಸ್ ತರಾಟೆ

ನವದೆಹಲಿ, ಡಿ. 5 – ಸರ್ಕಾರದ ಗೋಧಿ ಆಮದು - ರಫ್ತು ನಿರ್ಧಾರವನ್ನು ಟೀಕಿಸಿರುವ ಕಾಂಗ್ರೆಸ್, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ವೈಭವೀಕರಣಕ್ಕಾಗಿ ಬಡವರನ್ನು ಸಂಕಷ್ಟಕ್ಕೆ ಸಿಲುಕಿಸಲಾಗುತ್ತಿದೆ ಎಂದು ಆರೋಪಿಸಿದೆ.

ರಷ್ಯಾದಿಂದ ಗೋಧಿ ಆಮದಿಗೆ ಸರ್ಕಾರ ಮುಂದಾ ಗಿದೆ. ಲೋಕಸಭಾ ಚುನಾವಣೆಗೆ ಮುಂಚೆ ಬೆಲೆ ನಿಯಂತ್ರಣಕ್ಕಾಗಿ ಈ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

ಕಳೆದ ವರ್ಷ ಪ್ರಧಾನಿ ವರ್ಚಸ್ಸು ಹೆಚ್ಚಿಸುವ ಸಲುವಾಗಿ ಗೋಧಿ ರಫ್ತಿಗೆ ಅನುಮತಿ ನೀಡ ಲಾಗಿತ್ತು. ಇದರಿಂದಾಗಿ ವರ್ಷಾಂ ತ್ಯಕ್ಕೆ ಗೋಧಿ ಆವಕ 15 ವರ್ಷ ಗಳಲ್ಲೇ ಕಡಿಮೆಯಾಗಿತ್ತು. ನಂತ ರವೇ ರಫ್ತು ನಿಷೇಧ ಹೇರಲಾಗಿತ್ತು ಎಂದವರು ಹೇಳಿದ್ದಾರೆ.

ಈಗ ಸರ್ಕಾರ ಗೋಧಿ ಆಮದಿಗೆ ಮುಂದಾಗಿರುವ ವರದಿಗಳು ಬಂದಿವೆ. ಕಳೆದ ವರ್ಷ ಗೋಧಿ ರಫ್ತು ಮಾಡಿದ ನಂತರ ಅದರ ಬೆಲೆ ಶೇ.50ರವರೆಗೂ ಹೆಚ್ಚಾಗಿದೆ ಎಂದು ರಮೇಶ್ ಟೀಕಿಸಿದರು.

# ಉಜ್ಜಿನಿ - ಸೊಕ್ಕೆ : ಇಂದು ವಿದ್ಯುತ್ ವ್ಯತ್ಯಯ

ಉಜ್ಜಿನಿ ವಿ.ವಿ ಕೇಂದ್ರ ಹಾಗೂ ಸೊಕ್ಕೆ ವಿ.ವಿ ಕೇಂದ್ರದಲ್ಲಿ ಬೃಹತ್ ಹಾಗೂ ತ್ರೈಮಾಸಿಕ ಕಾಮಗಾರಿ ಹಮ್ಮಿಕೊಂಡಿರುವುದ ರಿಂದ ಇಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ಸೊಕ್ಕೆ ವಿ.ವಿ ಕೇಂದ್ರದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮಗಳ ಎನ್.ಜೆ.ವೈ ಮಾರ್ಗಗಳು ಮತ್ತು ನೀರಾವರಿ ಪಂಪ್ ಸೆಟ್ ಮಾರ್ಗಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.


**ಕೆಲಸಕ್ಕೆ ಬೇಕಾಗಿದ್ದಾರೆ**
ಕೆಫೆಯಲ್ಲಿ ಸರ್ವೀಸ್ ಮತ್ತು ವಾಷಿಂಗ್ ಮಾಡಲು ಯುವಕರು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC, PUC Pass/Fail.
ವಯಸ್ಸು : 18 ರಿಂದ 28. ಸಂಪರ್ಕಿಸಿ.
93804 69079

**ಸೈಟು ಮಾರಾಟಕ್ಕೆ (KHB)**
ಕರ್ನಾಟಕ ಗೃಹಮಂಡಳಿಯಲ್ಲಿ ಮತ್ತು ಪಕ್ಕ
1) 30x40 ಪೂರ್ವ, 2,500 ಅಡಿಗೆ
2) 30x40 ದಕ್ಷಿಣ, 2,450 ಅಡಿಗೆ
3) 40x60 ದಕ್ಷಿಣ, 2,600 ಅಡಿಗೆ
4) ಪಕ್ಕ 30x40 ಕಾರ್ನರ್, 2,300 ಅಡಿಗೆ
5) ಪಕ್ಕ 30x40 ಪೂರ್ವ, 2,300 ಅಡಿಗೆ
ಕಿರಣ್ ಬೂಸ್ನೂರ್ (ಏಜೆಂಟ್)
97315 63409

**ಸೈಟು ಮಾರಾಟಕ್ಕಿದೆ**
ಶಾಮನೂರು ಬೈಪಾಸ್ ಪಕ್ಕ ಸರ್ಕಾರಿ ನೌಕರರ ಬಡಾವಣೆ 'ಬಿ' ಬ್ಲಾಕ್‌ನಲ್ಲಿ ಪೂರ್ವಕ್ಕೆ 24.3x30 ಅಳತೆಯ ಸೈಟು ಮಾರಾಟಕ್ಕಿದೆ ಸಂಪರ್ಕಿಸಿ :
ಮೊ. 99021-13374

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಬೇಕಾಗಿದ್ದಾರೆ**
ಕ್ಲೀನಿಂಗ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ಭೇಟಿಯ ಸಮಯ : ಬೆಳಿಗ್ಗೆ 11 ರಿಂದ ಸಂಜೆ 5ರವರೆಗೆ.
ಸಂಪರ್ಕಿಸಿ:
08192 254736

**ಬೇಕಾಗಿದ್ದಾರೆ**
ಸೇಲ್ಸ್‌ಮನ್
(ಪಾರ್ಟ್ ಟೈಂ/ಫುಲ್ ಟೈಂ) ಹಾಗೂ ಡಿಲೆವರಿ ಬಾಯ್ಸ್ ಬೇಕಾಗಿದ್ದಾರೆ.
ಅನುಭವವುಳ್ಳವರು ಸಂಪರ್ಕಿಸಿ :
ಮಣಿಕಂಠ ಏಜೆನ್ಸೀಸ್
ಜಯದೇವ ಪ್ರೆಸ್ ಹಿಂಭಾಗ, ಚೌಕಿಪೇಟೆ, ದಾವಣಗೆರೆ.
94482 33326, 78991 35660

**ತಕ್ಷಣ ಬೇಕಾಗಿದ್ದಾರೆ**
ಟೆಲಿಕಾಲರ್ ಮಹಿಳೆಯರು ಅಂಗಡಿಯಲ್ಲಿ ಸಹಾಯಕರು, ಹುಡುಗ, ಹುಡುಗಿಯರು ಪಾರ್ಟ್‌ಟೈಂ ಕೆಲಸಕ್ಕೆ ಹುಡುಗಿಯರು ತಕ್ಷಣ ಬೇಕಾಗಿದ್ದಾರೆ.
91486 70932
79751 07268

**ಇಂಡಸ್ಟ್ರೀಯಲ್ ಸೈಟುಗಳು ಮಾರಾಟಕ್ಕಿವೆ**
ಹಳೆಯ ಪಿ.ಬಿ.ರಸ್ತೆಗೆ ನೇರ ಸಂಪರ್ಕವಿರುವ ಒಳ ರಸ್ತೆಗೆ (ಹರಿಹರದ ಕಡೆ) ಇಂಡಸ್ಟ್ರೀಯಲ್ ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ.
9742434049

**ಡ್ರೈವರ್ ಬೇಕಾಗಿದ್ದಾರೆ**
TATA ACE / Ashoka Leyland,
70190 51306

**FOR RENT**
3 BHK, House with AC 1st Floor, Car Parking Available. Behind Vishweshwaraiah Park, P.J. Extension, Davanagere.
79755 41256, 94823 51770

**ಬೇಕಾಗಿದ್ದಾರೆ**
ಉಳಿತಾಯ ಸಂಘದ ಪ್ರಮೋಷನ್‌ಗಾಗಿ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
ಪಾರ್ಟ್-ಟೈಂ, ಫುಲ್-ಟೈಂ
08192 468750, 94488 38780

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು
ದಿ.6.12.2023ರ ಬುಧವಾರ
ದಿ.7.12.2023ರ ಗುರುವಾರ
ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಸ್ವಾಮಿ ಅಯ್ಯಪ್ಪ ಟ್ರಾವೆಲ್ಸ್**
ಕಾಶಿ ಪ್ರವಾಸ 09.02.2024 ರಿಂದ 19.02.2024ರವರೆಗೆ
ಕಾಶಿ, ಅಯೋಧ್ಯೆ, ಪ್ರಯಾಗರಾಜ್, ಆಗ್ರಾ, ಮಥುರಾ, ದೆಹಲಿ. ಕಾಶಿ ಪ್ರವಾಸಕ್ಕೆ ಕೇವಲ 20 ಸೀಟುಗಳು ಇವೆ. ಆಸಕ್ತಿಯುಳ್ಳವರು ವಿಚಾರಿಸಿ :
94485 33928, 90086 26473

**ಕೆಲಸಕ್ಕೆ ಬೇಕಾಗಿದ್ದಾರೆ**
Tally ಅನುಭವ ಇರುವ ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ.
ಕಿಸಾನ್ ವರ್ಲ್ಡ್
ವಾಣಿ ರೈಸ್ ಮಿಲ್ ಎದುರು, ಹದಡಿ ರೋಡ್ ದಾವಣಗೆರೆ.
99642 12379

**ಎಲೆಬೇತೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ**
ಎಲೆಬೇತೂರು, ದಾವಣಗೆರೆ ತಾ. ಮತ್ತು ಜಿಲ್ಲೆ.
ಟೆಂಡರ್ ಸಂಖ್ಯೆ : PACS/WH1/2023-24
**ಅಲ್ಪಾವಧಿ ಟೆಂಡರ್ ಪ್ರಕಟಣೆ**
ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ ಎಲೆಬೇತೂರು ಕಛೇರಿಗೆ ವಾಣಿಜ್ಯ ಸಂಕೀರ್ಣ ಮಳಿಗೆ ಕಟ್ಟಡದ ನಿರ್ಮಾಣಕ್ಕಾಗಿ ದ್ವಿ ಲಕೋಟೆ ಪದ್ಧತಿಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಕಾನೂನು ರೀತ್ಯ ನೋಂದಣಿಯಾದ ಎಲ್ಲಾ ದಾಖಲೆಗಳನ್ನು ತಾಂತ್ರಿಕ ಲಕೋಟೆ ಹಾಗೂ ಆರ್ಥಿಕ ಲಕೋಟೆಯಲ್ಲಿಟ್ಟು, ಸೀಲ್ಡ್ ಮಾಡಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ ಎಲೆಬೇತೂರು ದಾವಣಗೆರೆ (ತಾ), ದಾವಣಗೆರೆ (ಜಿ) ಇವರಿಗೆ ದಿನಾಂಕ 06.12.2023ರ ಸಂಜೆ 4.30ರ ಒಳಗೆ ಸಲ್ಲಿಸುವುದು. ತಾಂತ್ರಿಕ ಲಕೋಟೆ ತೆರೆ ದಿನಾಂಕ 7.12.2023ರ ಮಧ್ಯಾಹ್ನ 3 ಗಂಟೆಗೆ ತೆರೆಯಲಾಗುವುದು. ಟೆಂಡರ್ ಅಂದಾಜು ಮೊತ್ತ ರೂ. 18,00,000/- ಇ.ಎಂ.ಡಿ ಮೊತ್ತ ರೂ. 90,000/- ಗಳನ್ನು ಕಾರ್ಯನಿರ್ವಾಹಣಾಧಿಕಾರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ ಎಲೆಬೇತೂರು ಇವರ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನಿಂದ ಡಿ.ಡಿ. ಪಡೆದು ಟೆಂಡರ್ ದಸ್ತಾವೇಜು ಜೊತೆಗೆ ಸಲ್ಲಿಸುವುದು. ಷರತ್ತು ಹಾಗೂ ಹೆಚ್ಚಿನ ಮಾಹಿತಿಗಾಗಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಎಲೆಬೇತೂರು. ಇದರ ದೂರವಾಣಿ ಸಂಖ್ಯೆ 99804 87472 ಇವರನ್ನು ಸಂಪರ್ಕಿಸುವುದು.
ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಎಲೆಬೇತೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಎಲೆಬೇತೂರು, ದಾವಣಗೆರೆ ತಾ. ಮತ್ತು ಜಿ.

**ಬೋರ್‌ವೆಲ್ ಪಾಯಿಂಟ್**
ಅಂತರ್ಜಲ ಸಂಶೋಧನೆ (Ground Water)
ಬೋರ್‌ವೆಲ್ ಪಾಯಿಂಟ್‌ಗಾಗಿ
ಸಂಪರ್ಕಿಸಿ
ಎಂ.ಟಿ. ಬಸವರಾಜು ಎಂ.ಎಸ್ಸಿ
ಭೂ ವಿಜ್ಞಾನಿಗಳು
94492 02888, 86608 03384

**Finance Advisor**
Full Times Job's Female.
Job Role Telecaller
Work time : 9.30AM to 6.30 PM & every Sunday holiday.
Salary : 6,000 to 10,000 +Incentives.
Qualification : 10th to 12 PUC or Degree.
Age Limit : 19 to 29.
Freshers & experience call or whatsapp
77959 44991, 96326 11005

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2&3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ರೈತ ಬಾಂಧವರೇ ಜೀವಾಮೃತ**
ಜವಾರಿ ತಳಿಯ ಆಕಳ ಸಗಣಿ, ಗಂಜಲ, ಸಾವಯವ ಬೆಲ್ಲ ಹಾಗೂ ದ್ವಿದಳ ಧಾನ್ಯದ ಹಿಟ್ಟಿನಿಂದ ವೈಜ್ಞಾನಿಕವಾಗಿ ತಯಾರಿಸಲಾದ ಕೃಷಿ ಮತ್ತು ತೋಟಗಾರಿಕೆ ಎಲ್ಲಾ ಬೆಳೆಗಳಲ್ಲಿ ಉಪಯೋಗಿಸಬಹುದು ಹಾಗೂ ನಮ್ಮಲ್ಲಿ ಅಡಿಕೆ ತೋಟದಲ್ಲಿ ಕಳೆಗಳಿಗೆ ಸ್ಪ್ರೇ ಮಾಡುವ ಸಾವಯವ ಕಳೆನಾಶಕ ದೊರೆಯುತ್ತದೆ.
ಸಂಪರ್ಕಿಸಿ : 98451 04109

**ಸೇಲ್ಸ್ & ಮಾರ್ಕೆಟಿಂಗ್**
ಸೇಲ್ಸ್ & ಮಾರ್ಕೆಟಿಂಗ್ ಕೆಲಸ ಮಾಡಲು ಪುರುಷರು ಬೇಕಾಗಿದ್ದಾರೆ.
ವಯೋಮಿತಿ-20 ರಿಂದ 30 ವರ್ಷ ಒಳಗೆ
ಸುವೀ ಇಂಡಸ್ಟ್ರೀಸ್
ಕರೂರು ಇಂಡಸ್ಟ್ರೀಯಲ್ ಏರಿಯಾ, ದಾವಣಗೆರೆ.
96206 38679

**ಶ್ರೀ ಸಾಯಿಬಾಬಾ ಬೋರ್‌ವೆಲ್**
350ರಿಂದ 450ರ ವರೆಗೂ ಕೊರೆಯಬಹುದು. ಮನೆ ಒಳಗೆ / ಮನೆ ಹೊರಗೆ. ದಾವಣಗೆರೆ.
99640 78484, 95906 15776

**ಬೇಕಾಗಿದ್ದಾರೆ**
ಹೋಟೆಲ್ ಕೆಲಸಕ್ಕೆ ಅಡುಗೆ ಭಟ್ಟರು ಬೇಕಾಗಿದ್ದಾರೆ.
(ಇಡ್ಲಿ, ವಡಾ, ರೈಸ್ ಐಟಂ)
ಸಂಪರ್ಕಿಸಿ
81050 56583

**PART TIME JOBS**
ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರವಣಿಗೆ ಹಾಗೂ ಫಾರಂ ಫಿಲ್ಲಿಂಗ್, ಪ್ಯಾಕಿಂಗ್, ಟೆಲಿಕಾಲಿಂಗ್, ಡಾಟಾ ಎಂಟ್ರಿ ಹಾಗೂ ಮೊಬೈಲ್ ಮೂಲಕ ತಿಂಗಳಿಗೆ 15,000 ದಿಂದ 30,000 ಸಂಪಾದಿಸಿ + (ಕೋರಿಯರ್ ಸೌಲಭ್ಯವಿದೆ)
87490 98879

ನೇರ ಪರೀಕ್ಷೆ ಕಟ್ಟಲು/ರೆಗ್ಯುಲರ್ ಪ್ರವೇಶಕ್ಕಾಗಿ
**SSLC ನೇರ ಪರೀಕ್ಷೆ**
IInd PUC/Senior Secondary, Arts/Commerce/Science B.Sc.-Agriculture, B.Tech All branches, D.Pharma, B.Ed., PhD regular B.A., B.com., B.Sc., M.A., M.Com., MBA, MLIB, Correspondence.
ಆಸಕ್ತರು ಫೋಟೋ-8, ಆಧಾರ್ ಕಾರ್ಡ್ ಹಾಗೂ ಮಾರ್ಕ್ಸ್ ಕಾರ್ಡ್‌ನೊಂದಿಗೆ ಸಂಪರ್ಕಿಸಿರಿ.
SS Global Institute for Higher Education
1982-1ನೇ ಮಹಡಿ, ಅನ್ವಯ ಆಯುರ್ವೇದಿಕ್ ಆಸ್ಪತ್ರೆ, ಶ್ರೀ ಸಾಯಿಬಾಬಾ ದೇವಸ್ಥಾನ ಹತ್ತಿರ, ಎಂಸಿಸಿ 'ಎ' ಬ್ಲಾಕ್, ದಾವಣಗೆರೆ-04.
72593 59861/99863 45266

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**ಮಳಿಗೆ ಬಾಡಿಗೆಗೆ ಇದೆ**
ಮಂಡಿಪೇಟೆ ರಸ್ತೆ, SBI ಬ್ಯಾಂಕ್ ಎದುರಿಗೆ.
ಅಳತೆ : 12 ಅಡಿ ಅಗಲ, 6 1/2 ಉದ್ದ
96638 28812

**ಶಾಲೆಗೆ ಆಯಾ ಬೇಕಾಗಿದ್ದಾರೆ**
ಜಯದೇವ ವೃತ್ತದ ಬಳಿಯ ಶಾಲೆಗೆ ಆಯಾ ಬೇಕಾಗಿದ್ದಾರೆ
Salary - 5000/- only
ಸಮಯ : 9 to 5 PM
63616 62669
99801 48289

**ಮೇಕ್ ಓವರ್ ಕ್ಲಾಸ್**
ಒಂದು ತಿಂಗಳ ತರಬೇತಿ.. ಮೇಕಪ್, ಸ್ಯಾರೀ ಡ್ರೇಪಿಂಗ್ ಮತ್ತು ಹೇರ್ ಸ್ಟೈಲ್, ಮೇಕಪ್ ಕಲಿಕೆಗೆ ಪ್ರಾಡಕ್ಟ್‌ಗಳನ್ನು ಕೊಡಲಾಗುತ್ತದೆ. ಎರಡು portfolio ಫೋಟೋ ಶೂಟ್‌ಗಳು ಹಾಗೂ ಸರ್ಟಿಫಿಕೇಟ್ ನೀಡಲಾಗುವುದು.
ಸಂಪರ್ಕಿಸಿ: Glamorous Studio
ಗಿರೀಜ - ಮೇಕಪ್ ಆರ್ಟಿಸ್ಟ್
94817 76305

**AVOID MOSQUITOES**
Mosquito Net For Doors & Windows
SRI GOWRI ENTERPRISES
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628

**Site For Sale**
30x40 North West Corner, Behind SS Hi-Tech Hospital, Davangere.
96069 04902

**ಬೇಕಾಗಿದ್ದಾರೆ**
ಟ್ಯಾಲಿ ಆಪರೇಟರ್ ಪುರುಷ ಅಭ್ಯರ್ಥಿ, ಡೆಲಿವರಿ ಬಾಯ್ಸ್ ಬೇಕಾಗಿದ್ದಾರೆ.
ಸಂಪರ್ಕಿಸಿ
98860 97065

# ನಗರದಲ್ಲಿ ಅಂಬೇಡ್ಕರ್ ಜ್ಯೋತಿ ಯಾತ್ರೆಗೆ ಸ್ವಾಗತ




ದಾವಣಗೆರೆ, ಡಿ. 5- ಕರ್ನಾಟಕ ದಲಿತ ಸಂಘಟನೆಗಳ ಒಕ್ಕೂಟದ ಜಿಲ್ಲಾ ಸಮಿತಿ ವತಿಯಿಂದ ಡಾ. ಬಿ.ಆರ್. ಅಂಬೇಡ್ಕರ್ ಅವರ 67ನೇ ಮಹಾಪರಿನಿರ್ವಾಣದ ಪ್ರಯುಕ್ತ ಅಸ್ಪೃಶ್ಯತಾ ನಿವಾರಣೆಗಾಗಿ ಹಮ್ಮಿಕೊಂಡಿರುವ ಅಂಬೇಡ್ಕರ್ ಜ್ಯೋತಿ ಯಾತ್ರೆ ಇಂದು ನಗರಕ್ಕೆ ಆಗಮಿಸಿದ ಸಂದರ್ಭದಲ್ಲಿ ಅದ್ದೂರಿಯಾಗಿ ಸ್ವಾಗತಿಸಿ, ಬೀಳ್ಕೊಡಲಾಯಿತು.

ಇನ್‌ಸೈಟ್ಸ್ ಐಎಎಸ್ ಸಂಸ್ಥೆಯ ಸಂಸ್ಥಾಪಕ ಜಿ.ಬಿ. ವಿನಯ್ ಕುಮಾರ್ ಜ್ಯೋತಿ ಯಾತ್ರೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಸಾಮಾಜಿಕ ಕಳಕಳಿಯುಳ್ಳವರು, ತಳ ಸಮುದಾಯದವರ ಸಮಸ್ಯೆಗಳನ್ನು ಅರಿತು ಅವರ ಅಭಿವೃದ್ಧಿಗೆ ಶ್ರಮಿಸುವವರು, ಅಂಬೇಡ್ಕರ್ ಚಿಂತನೆಗಳನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಸಂಸತ್ ಸದಸ್ಯರು ಕಾರ್ಯೋನ್ಮುಖರಾಗಬೇಕಾಗಿದೆ ಎಂದರು.

ನಾಗಪುರ್ ದೀಕ್ಷಾ ಭೂಮಿ ಕಾರ್ಯಕ್ರಮವನ್ನು ಸಹ ಹಮ್ಮಿಕೊಂಡಿದ್ದು, ಈ ವೇಳೆ ದಲಿತ ಮುಖಂಡರಾದ ಸಿ. ಬಸವರಾಜ್, ಹೆಗ್ಗೆರೆ ರಂಗಪ್ಪ, ಆಲೂರು ನಿಂಗರಾಜ್, ಬಿ.ಆರ್. ಮಂಜುನಾಥ್, ಬಿ. ಮಂಜುನಾಥ್, ವಿಜಯ ಪುಟಗನಾಳ್, ಕೊಪ್ಪಳ ಮಂಜುನಾಥ, ಹೇಮಂತ ಚನ್ನಗಿರಿ, ರಮೇಶ್ ಹೊನ್ನಾಳಿ, ಪ್ರಶಾಂತ ಆನಗೋಡು, ಸದಾನಂದ ಚಿಕ್ಕನಹಳ್ಳಿ, ಲಿಂಗರಾಜ್ ಶಿರಮಗೊಂಡನಹಳ್ಳಿ, ರುದ್ರಪ್ಪ, ಸೋಮಲಾಪುರ ಹನುಮಂತಪ್ಪ, ಹನುಮಂತ, ನಾಗರಾಜ್ ಬಸಾಪುರ ಮತ್ತಿತರರು ಭಾಗವಹಿಸಿದ್ದರು.

# ಸೇವೆ ಖಾಯಂಗೊಳಿಸಲು ಅತಿಥಿ ಉಪನ್ಯಾಸಕರ ಆಗ್ರಹ

ದಾವಣಗೆರೆ, ಡಿ.5- ಸರ್ಕಾರಿ ಪದವಿ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರನ್ನು ಖಾಯಂಗೊಳಿಸುವಂತೆ ಒತ್ತಾಯಿಸಿ, ರಾಜ್ಯ ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ಹಿತರಕ್ಷಣಾ ಸಮಿತಿ ಕರ್ನಾಟಕದ ನೇತೃತ್ವದಲ್ಲಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲಾಯಿತು.




ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿದ ಸಮಿತಿ ಪದಾಧಿಕಾರಿಗಳು ಮತ್ತು ಅತಿಥಿ ಉಪನ್ಯಾಸಕರು ಜಿಲ್ಲಾಧಿಕಾರಿ ಡಾ.ವೆಂಕಟೇಶ್ ಅವರಿಗೆ ಮನವಿ ಪತ್ರ ಸಲ್ಲಿಸುವ ಮೂಲಕ ಉನ್ನತ ಶಿಕ್ಷಣ ಸಚಿವರಿಗೆ ತಮ್ಮ ಬೇಡಿಕೆಗಳ ಈಡೇರಿಕೆಗೆ ಮನವಿ ಮಾಡಿದರು.

ರಾಜ್ಯದ 430 ಸರ್ಕಾರಿ ಪದವಿ ಕಾಲೇಜುಗಳಲ್ಲಿ ಸುಮಾರು 11500 ಜನ ಅತಿಥಿ ಉಪನ್ಯಾಸಕರು ಎರಡು ದಶಕಗಳಿಂದ ನಿರಂತರವಾಗಿ ಸೇವೆ ಸಲ್ಲಿಸುತ್ತಾ ಬಂದಿದ್ದು, ನಮ್ಮ ಖಾಯಂಮಾತಿಗಾಗಿ ಸರ್ಕಾರದ ಗಮನ ಸೆಳೆಯಲು ವಿವಿಧ ರೀತಿಯಲ್ಲಿ ಹೋರಾಟ ಮಾಡುತ್ತಾ ಬಂದಿದ್ದರೂ ಸಹ ಸರ್ಕಾರದಿಂದ ಯಾವುದೇ ಪ್ರತಿಫಲ ಸಿಕ್ಕಿಲ್ಲ. 'ಅತಿಥಿ' ಎಂಬ ಅವೈಜ್ಞಾನಿಕ ಪದ ಬಳಕೆಯಿಂದ ಇಂದು ನಾವು ಆಧುನಿಕ ಜೀತ ಪದ್ಧತಿಯನ್ನು ಅನುಭವಿಸುತ್ತಿದ್ದೇವೆ. ಅನೇಕ ಸರ್ಕಾರಗಳ ನಿರ್ಲಕ್ಷ್ಯ ಧೋರಣೆಯಿಂದ ಅತಿಥಿ ಉಪನ್ಯಾಸಕರು ಅತಂತ್ರ ಜೀವನವನ್ನು ಅನುಭವಿಸಬೇಕಾಗಿದೆ ಎಂದು ಅತಿಥಿ ಉಪನ್ಯಾಸಕರು ಮನವಿ ನೀಡುವಾಗ ಅಳಲು ಹಂಚಿಕೊಂಡಿದ್ದಾರೆ.

ಈ ಹಿಂದೆ ಅರೆಕಾಲಿಕ, ಜೆ.ಓ.ಸಿ ಉಪನ್ಯಾಸಕರನ್ನು ಹಾಗೂ ಪ್ರಸ್ತುತ ಸರ್ಕಾರದಲ್ಲಿ ಗ್ರಾಮ ಪಂಚಾಯಿತಿ, ಸಹಕಾರ ಇಲಾಖೆ ಮುಂತಾದವುಗಳಲ್ಲಿ ಖಾಯಂ ಮಾಡಿದ ನಿದರ್ಶನಗಳಿವೆ. ಈಗಿನ ಮುಖ್ಯಮಂತ್ರಿಗಳು ಹಿಂದಿನ ವಿರೋಧ ಪಕ್ಷದಲ್ಲಿದ್ದಾಗ ಅತಿಥಿ ಉಪನ್ಯಾಸಕರ ಬಗ್ಗೆ ಸದನದಲ್ಲಿ ಧ್ವನಿ ಎತ್ತಿ ಸಹಾನುಭೂತಿ ತೋರಿಸಿದ್ದರು. ತಮ್ಮ ಚುನಾವಣೆ ಪ್ರಣಾಳಿಕೆಯಲ್ಲಿ ಅತಿಥಿ ಉಪನ್ಯಾಸಕರನ್ನು ಖಾಯಂಗೊಳಿಸುವಂತೆ ಹೇಳಲಾಗಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈಗಾಗಲೇ ಸಾಕಷ್ಟು ಜನ ಅತಿಥಿ ಉಪನ್ಯಾಸಕರು ನಿವೃತ್ತಿಯಾಗಿದ್ದಾರೆ. ಕೆಲವರು ನಿವೃತ್ತಿ ಅಂಚಿನಲ್ಲಿದ್ದಾರೆ. ಹಲವಾರು ಅತಿಥಿ ಉಪನ್ಯಾಸಕರು ಗಂಭೀರ ಕಾಯಿಲೆಗಳಿಂದ, ಹೃದಯಾಘಾತ, ಆತ್ಮಹತ್ಯೆಯಂತಹ ಸಂಗತಿಗಳಿಂದ ಸಾವನ್ನಪ್ಪಿದ್ದಾರೆ. ಇವರುಗಳಿಗೆ ಇದುವರೆಗೂ ಯಾವುದೇ ಪರಿಹಾರ ಸಿಕ್ಕಿಲ್ಲ. ಆದರೆ ಖಾಯಂಮಾತಿಗೊಳಪಡಿಸುವುದು, ಮುಂಬರುವ ಚಳಿಗಾಲದ ಅಧಿವೇಶನದಲ್ಲಿ ಪ್ರಣಾಳಿಕೆಯಲ್ಲಿ ತಿಳಿಸಿರುವಂತೆ ಖಾಯಂ ಮಾತಿ ಇದಕ್ಕೊಂದೇ ಮಾರ್ಗ. ಅತಿಥಿ ಉಪನ್ಯಾಸಕರಿಗೆ ಶಾಶ್ವತ ಪರಿಹಾರವನ್ನು ನೀಡಿ, ಮಾನವೀಯತೆ ನೆಲೆಯಲ್ಲಿ ನೇಮಕಾತಿ ಮಾಡುವುದರೊಂದಿಗೆ ಐತಿಹಾಸಿಕ ನಿರ್ಧಾರವನ್ನು ತೆಗೆದುಕೊಳ್ಳಬೇಕೆಂದು ಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ ಸಚಿವರಿಗೆ ಒತ್ತಾಯಿಸಿದ್ದಾರೆ.

# ನಗರದಲ್ಲಿ ಇಂದು ಅಯ್ಯಪ್ಪ ಸ್ವಾಮಿ ಧ್ವಜ ಸ್ತಂಭದ ಪೂಜೆ



ಜಿಲ್ಲಾ ಸಾರ್ವಜನಿಕ ಅಯ್ಯಪ್ಪ ಸ್ವಾಮಿ ಸೇವಾ ಟ್ರಸ್ಟ್ ವತಿಯಿಂದ ಇಂದು ಬೆಳಿಗ್ಗೆ 11 ಗಂಟೆಗೆ ಹೊಳೆ ಹೊನ್ನೂರು ತೋಟದಲ್ಲಿ ಅಯ್ಯಪ್ಪ ಸ್ವಾಮಿ ಮಹೋತ್ಸವ ನಡೆಯಲಿದೆ.

ಈ ಮಹೋತ್ಸವದ ಅಂಗವಾಗಿ ಧ್ವಜ ಸ್ತಂಭದ ಪೂಜಾ ಕಾರ್ಯಕ್ರಮ ಜರುಗಲಿದೆ. ಶ್ರೀ ಅಯ್ಯಪ್ಪ ಸ್ವಾಮಿ ಅಭಿಷೇಕ ಹೋಮ ಹಾಗೂ ಪೂಜಾ ಕಾರ್ಯಕ್ರಮ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : 9448837955, 9880088984.

# ಯುಜಿಸಿ ಸೂಚನೆಗೆ ಎಐಡಿಎಸ್‌ಓ ಖಂಡನೆ

ದಾವಣಗೆರೆ, ಡಿ. 5- ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಸೆಲ್ಫಿ ಪಾಯಿಂಟ್‌ಗಳನ್ನು ಸ್ಥಾಪಿಸಲು ಯುಜಿಸಿ ಸೂಚಿಸಿರುವ ಸೂಚನೆಯನ್ನು ಎಐಡಿಎಸ್‌ಓ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಖಂಡಿಸಿದ್ದಾರೆ.

ಆಡಳಿತ ಪಕ್ಷದ ನಾಯಕರನ್ನು ಬಿಂಬಿಸುವ ಯುಜಿಸಿಯ ಈ ಸೂಚನೆಯು ಅಪ್ರಜಾತಾಂತ್ರಿಕವಾಗಿದೆ. ದೇಶದ ಶೈಕ್ಷಣಿಕ ವ್ಯವಸ್ಥೆಯು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸುವುದರ ಬದಲು, ಒಬ್ಬ ನಾಯಕರ ವ್ಯಕ್ತಿಪೂಜೆ, ಒಂದು ವಿಚಾರಧಾರೆ ಸೇರಿದಂತೆ, ಏಕಮುಖ ಚಿಂತನೆಯಲ್ಲಿ ದೇಶದ ವಿದ್ಯಾರ್ಥಿ ಯುವಜನತೆಯನ್ನು ಮುಳುಗಿಸುವ ಅಪಾಯಕಾರಿ, ಫ್ಯಾಸಿವಾದಿ ನಡೆ ಇದಾಗಿದೆ ಎಂದಿದ್ದಾರೆ.

ಇದರ ಬದಲಾಗಿ ಶಿಕ್ಷಣದ ವ್ಯಾಪಾರೀಕರಣ, ಖಾಸಗೀಕರಣ, ಸಾರ್ವಜನಿಕ ಶಿಕ್ಷಣ ಸಂಸ್ಥೆಗಳ ಮುಚ್ಚುವಿಕೆ ಸೇರಿದಂತೆ ದೇಶದ ಶಿಕ್ಷಣ ವ್ಯವಸ್ಥೆಯು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಯುಜಿಸಿ ಕಾರ್ಯಪ್ರವೃತ್ತರಾಬೇಕಾಗಿದೆ ಎಂದು ಸಲಹೆ ನೀಡಿದ್ದಾರೆ.

ಯಾವುದೋ ಒಬ್ಬ ರಾಜಕೀಯ ನಾಯಕರನ್ನು ಬಿಂಬಿಸುವ ಬದಲಿಗೆ ದೇಶದ ಶಿಕ್ಷಣದ ಏಳಿಗೆಗಾಗಿ ಶ್ರಮಿಸಿದ ನವೋದಯ ಹರಿಕಾರರಾದ ಈಶ್ವರಚಂದ್ರ ವಿದ್ಯಾಸಾಗರ್, ರಾಜಾರಾಮ್ ಮೋಹನ್ ರಾಯ್, ಜ್ಯೋತಿ ಬಾ ಪುಲೆ, ಕ್ರಾಂತಿಕಾರಿ ಭಗತ್‌ಸಿಂಗ್, ನೇತಾಜಿ ಸುಭಾಷ್‌ಚಂದ್ರ ಬೋಸ್ ಮುಂತಾದವರ ಚಿಂತನೆಗಳನ್ನು ವಿದ್ಯಾರ್ಥಿಗಳ ಮಧ್ಯೆ ಹರಡುವ ಪ್ರಯತ್ನ ಮಾಡಬೇಕೆಂದು ಆಗ್ರಹಿಸಿದ್ದಾರೆ.


# ನಾಗರಿಕ ಬಂದೂಕು ತರಬೇತಿ ಶಿಬಿರಕ್ಕೆ ಚಾಲನೆ



ದಾವಣಗೆರೆ, ಡಿ. 5- ನಗರದ ಡಿ.ಎ.ಆರ್. ಸಭಾಂಗಣದಲ್ಲಿ ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ನಾಗರಿಕ ಬಂದೂಕು ತರಬೇತಿ ಶಿಬಿರ ನಡೆಯಿತು. ಶಿಬಿರಕ್ಕೆ ಬಿ.ಡಿವೈಎಸ್ಪಿ ಪ್ರಕಾಶ್ ಪಿ. ದೀಪ ಬೆಳಗಿಸುವುದರ ಮೂಲಕ ಚಾಲನೆ ನೀಡಿದರು.

ವೇದಿಕೆಯಲ್ಲಿ ಸೋಮಶೇಖರಪ್ಪ ಹೆಚ್. ಬಿ.ಆರ್.ಪಿ.ಐ. ಮಹೇಶ್ ಪಾಟೀಲ್, ಆರ್‌ಎಸ್‌ಐ ನವೀನ್, ಎನ್‌ಎಆರ್‌ಎಸ್‌ಐ ಸಿಬ್ಬಂದಿಗಳಾದ ಬಸವರಾಜ್ ಟಿ, ಪುಟ್ಟಪ್ಪ ಬಿ.ಎಸ್., ಕೆ.ಪಿ. ಶರತ್ ಹಾಗೂ ಶಿಬಿರಾರ್ಥಿಗಳು ಉಪಸ್ಥಿತರಿದ್ದರು. ಹತ್ತು ದಿನಗಳ ಕಾಲ ನಾಗರಿಕ ಬಂದೂಕು ತರಬೇತಿಯನ್ನು ಡಿ.ಎ.ಆರ್. ಮೈದಾನದಲ್ಲಿ ಪಡೆಯಲಿದ್ದಾರೆ.

# ನಗರದ ಶ್ರೀ ಗೌರಮ್ಮಾಜಿ ಅಧ್ಯಾತ್ಮ ಮಂದಿರದಲ್ಲಿ ಇಂದು ಕಾರ್ತಿಕ



ಎಸ್.ಎಸ್.ಲೇ-ಔಟ್ 'ಬಿ' ಬ್ಲಾಕ್, ರಿಂಗ್ ರಸ್ತೆಯಲ್ಲಿರುವ ಶ್ರೀ ಸ.ಸ. ಗೌರಮ್ಮಾಜಿ ಅಧ್ಯಾತ್ಮ ಮಂದಿರದಲ್ಲಿ ಶ್ರೀ ಗೌರಮ್ಮಾಜಿ ಮಹಾರಾಜರ 28ನೇ ಜ್ಞಾನಯಜ್ಞ ಸಪ್ತಾಹ ಮತ್ತು ಕಾರ್ತಿಕ ಮಹೋತ್ಸವವನ್ನು ಹಮ್ಮಿಕೊಳ್ಳಲಾಗಿದೆ.

ಇಂದು ಬೆಳಿಗ್ಗೆ ಕಾಕಡಾರತಿ, ಪೂಜೆ, ಭಜನೆ ನಂತರ ಸಂಜೆ 4 ಗಂಟೆಯಿಂದ ಪೂಜ್ಯ ಮಾತೋಶ್ರೀ ಗೌರಮ್ಮಾಜಿ ಉತ್ಸವ ಭಾವಚಿತ್ರದ ಅಲಂಕೃತ ಪಾಲಕಿಯ ಮೆರವಣಿಗೆ ಜರುಗಲಿದೆ. ರಾತ್ರಿ 10 ಗಂಟೆಗೆ ಕಾರ್ತಿಕ ದೀಪಗಳನ್ನು ಬೆಳಗಿಸಿ, ಜಾಗರಣೆ ಆಚರಿಸಲಾಗುವುದು.

ನಾಳೆ ಗುರುವಾರ ಬೆಳಗಿನ ಪೂಜಾದಿ ಕಾರ್ಯಕ್ರಮಗಳ ನಂತರ ಮಧ್ಯಾಹ್ನ 12 ಗಂಟೆಗೆ ಮಾತೋಶ್ರೀಯವರ 'ಪುಣ್ಯಸ್ಮರಣೆ' ಮತ್ತು ಪುಷ್ಪವೃಷ್ಟಿಗೈಯ್ಯುವ ಕಾರ್ಯಕ್ರಮವಿದೆ.

# ಜ.6 ರಂದು ರಾಜ್ಯ ಮಟ್ಟದ ಮಹಿಳಾ ಸಮ್ಮೇಳನ

ದಾವಣಗೆರೆ, ಡಿ.5- ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯಿಂದ ಬರುವ ಜನವರಿ 6 ಹಾಗೂ 7 ರಂದು 7ನೇ ರಾಜ್ಯಮಟ್ಟದ ಮಹಿಳಾ ಸಮ್ಮೇಳನ ಹಮ್ಮಿಕೊಂಡಿರುವುದಾಗಿ ಸಂಘಟನೆಯ ರಾಜ್ಯಾಧ್ಯಕ್ಷರಾದ ಬಿ.ಆರ್. ಅಪರ್ಣಾ ತಿಳಿಸಿದ್ದಾರೆ.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತಾಡಿದ ಅವರು, ಜನವರಿ 6ರಂದು ಬೆಳಿಗ್ಗೆ 10 ಗಂಟೆಗೆ ನಗರದ ಹೈಸ್ಕೂಲ್ ಮೈದಾನದಲ್ಲಿ ಬಹಿರಂಗ ಅಧಿವೇಶನ, 11 ಗಂಟೆಗೆ ಸಾರ್ವಜನಿಕ ಸಭೆ ನಡೆಯಲಿದೆ. ಸಂಜೆ 4 ಗಂಟೆ ನಂತರ ಹಾಗು ಜನವರಿ 7ರಂದು ಪೂರ್ಣ ದಿನ ಪ್ರತಿನಿಧಿಗಳ ಸಮಾವೇಶವು ಚನ್ನಗಿರಿ ವಿರೂಪಾಕ್ಷಪ್ಪ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ ಎಂದು ಹೇಳಿದರು. ಸಾಹಿತಿ ರೂಪಾ ಹಸನ್ ಸಮಾವೇಶ ಉದ್ಘಾಟಿಸಲಿದ್ದಾರೆ. ಡಾ. ಪಿ. ಅನುರಾಧ ಅವರು ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದಾರೆ.

ಸ್ವಾತಂತ್ರ್ಯ ಸಿಕ್ಕು 76 ವರ್ಷಗಳಾದರೂ ಮಹಿಳೆಯರ ಮೇಲಿನ ದೌರ್ಜನ್ಯಗಳು ಕಡಿಮೆಯಾಗಿಲ್ಲ. ದೌರ್ಜನ್ಯಗಳನ್ನು ತಡೆಯಬೇಕು. ಅಸಂಘಟಿತ ವಲಯದ ಮಹಿಳೆಯರಿಗೆ ಕನಿಷ್ಟ ವೇತನ ಹಾಗೂ ಭದ್ರತೆ ನೀಡುವುದು ಸೇರಿದಂತೆ, ಹಲವಾರು ಹಕ್ಕೊತ್ತಾಯಗಳನ್ನು ಮಂಡಿಸಲಾಗುವುದು ಎಂದವರು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಕಾರ್ಯದರ್ಶಿ ಭಾರತಿ, ಶೋಭಾ, ಮಮತಾ, ಕವಿತಾ ಇತರರಿದ್ದರು.

# ದೀನ - ದುರ್ಬಲರ ಸೇವೆಯೇ ಸೇವಾದಳದ ಸದುದ್ದೇಶ

**ಸೇವಾದಳದ ಜಿಲ್ಲಾ ಘಟಕದ ಅಧ್ಯಕ್ಷ ಪ್ರೊ. ಹೆಚ್. ಚನ್ನಪ್ಪ ಪಲ್ಲಾಗಟ್ಟೆ**

ದಾವಣಗೆರೆ, ಡಿ.5- ಸೇವಾದಳದ ಸದಸ್ಯರೆಲ್ಲರೂ ಸಕ್ರಿಯರಾದರೆ ಜಿಲ್ಲಾ ಘಟಕವನ್ನು ರಾಜ್ಯದಲ್ಲೇ ನಂಬರ್ ಒನ್ ಮಾಡಬಹುದು ಎಂದು ಭಾರತ ಸೇವಾದಳ ಜಿಲ್ಲಾ ಘಟಕದ ಅಧ್ಯಕ್ಷ ಪ್ರೊ. ಹೆಚ್. ಚನ್ನಪ್ಪ ಪಲ್ಲಾಗಟ್ಟೆ ಹೇಳಿದರು.

ಭಾರತ ಸೇವಾದಳದ ಕಛೇರಿಯಲ್ಲಿ ಆಜೀವ ಸದಸ್ಯರನ್ನುದ್ದೇಶಿಸಿ ಅವರು ಮಾತನಾಡಿದರು. ಗಾಂಧೀಜಿಯವರ ಸ್ವಾತಂತ್ರ್ಯ ಹೋರಾಟದಲ್ಲಿನ ಅಹಿಂಸಾತ್ಮಕ ಸತ್ಯಾಗ್ರಹ ಮತ್ತು ರಚನಾತ್ಮಕ ಕಾರ್ಯಗಳಿಗೆ ಒಂದು ಮೂರ್ತ ಸ್ವರೂಪ ನೀಡಲು ರೂಪುಗೊಂಡ ಸ್ವಯಂ ಸೇವಾ ಸಂಸ್ಥೆಯೇ ಭಾರತ ಸೇವಾದಳ.

ಕರ್ನಾಟಕದವರೇ ಆದ ನಾ.ಸು.ಹರ್ಡೇಕರ್‌ರವರು ಮಹಾತ್ಮಾ ಗಾಂಧೀಜಿಯವರ ಕಾರ್ಯಕ್ರಮಗಳು ಶಿಸ್ತು ಬದ್ಧವಾಗಿ, ಅರ್ಥಪೂರ್ಣವಾಗಿ ಹಾಗೂ ಯಶಸ್ವಿಯಾಗಿ ಜರುಗಲು ಯುವ ಜನರನ್ನೊಳಗೊಂಡ ಹಿಂದೂಸ್ಥಾನಿ ಸೇವಾದಳ ಎಂಬ ಸೇವಾ ಸಂಸ್ಥೆಯನ್ನು ಸ್ಥಾಪಿಸಿದರು. ಸ್ವಾತಂತ್ರ್ಯಾ ನಂತರ ಇದು ಭಾರತ ಸೇವಾದಳ ಸಂಸ್ಥೆಯಾಗಿ ರೂಪುಗೊಂಡಿತು.

ಸ್ವಾತಂತ್ರ್ಯಾ ನಂತರ ದೇಶದ ಯುವ ಜನರಲ್ಲಿ ದೇಶಭಕ್ತಿ, ರಚನಾತ್ಮಕ ಕಾರ್ಯಗಳಾದ ಸಮಾಜದ ದೀನ-ದುರ್ಬಲರ ಸೇವೆ, ಭ್ರಾತೃತ್ವ, ಸ್ವಚ್ಛತೆ ಮುಂತಾದ ಕಾರ್ಯಗಳಲ್ಲಿ ತೊಡಗಿಕೊಳ್ಳುವಂತೆ ಶಿಕ್ಷಣ, ತರಬೇತಿ ನೀಡುವುದು ಈ ಸಂಸ್ಥೆಯ ಧ್ಯೇಯೋದ್ದೇಶವಾಗಿದೆ. ಇದು ಯಾವುದೇ ರಾಜಕೀಯ ಪ್ರಭಾವಗಳಿಂದ ಮುಕ್ತ ಮತ್ತು ಪಕ್ಷಾತೀತ ಸಂಸ್ಥೆಯಾಗಿದ್ದು ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ಯುವ ಜನರಿಗೆ, ಶಿಕ್ಷಕರಿಗೆ ತರಬೇತಿ ಶಿಬಿರಗಳನ್ನು ಏರ್ಪಡಿಸುತ್ತಾ ಬಂದಿದೆ ಎಂದು ಅವರು ವಿವರಿಸಿದರು.

## ಡೀಪ್‌ಫೇಕ್ ಪೋರ್ಜರಿಗೆ ಸಮ

**(1ನೇ ಪುಟದಿಂದ)** ಸಮಸ್ಯೆಯಾಗದಂತೆ ನೋಡಿಕೊಳ್ಳಬೇಕು. ಈ ವಿಷಯದಲ್ಲಿ ಲೋಪವಾಗುವುದನ್ನು ಸರ್ಕಾರ ಎಳ್ಳಷ್ಟೂ ಸಹಿಸುವುದಿಲ್ಲ ಎಂದು ಸರ್ಕಾರ ತಿಳಿಸಿದೆ. ಒಂದು ವಾರದ ನಂತರ ಸಾಮಾಜಿಕ ಜಾಲತಾಣ ಕಂಪನಿಗಳ ಜೊತೆ ಸರ್ಕಾರ ಮತ್ತೊಂದು ಸಭೆ ನಡೆಸಲಿದೆ.

## ಅರಣ್ಯದಲ್ಲೇ ಆನೆಗಳಿಗೆ ಮೇವು

**(1ನೇ ಪುಟದಿಂದ)** ಪ್ರಯೋಜನವಾಗುತ್ತಿಲ್ಲ. ನಮಗಿಂತ ಕಾಡುಪ್ರಾಣಿಗಳು ಬುದ್ಧಿವಂತವಾಗಿದ್ದು, ಅವುಗಳು ಇವನ್ನು ನುಸುಳಿ ಬರುತ್ತಿವೆ. ಇಲಾಖೆ ಸುರಕ್ಷಾ ಕ್ರಮ ಕೈಗೊಳ್ಳಲು ನಮ್ಮ ಎಲ್ಲಾ ಸಹಕಾರ ಇದೆ ಎಂದರು.

# ಕೀನ್ಯಾದ ಕೃಷಿ ಆಧುನೀಕರಣಕ್ಕೆ 250 ದಶಲಕ್ಷ ಡಾಲರ್

ನವದೆಹಲಿ, ಡಿ. 5 - ಕೀನ್ಯಾದ ಕೃಷಿ ವಲಯದ ಆಧುನೀಕರಣಕ್ಕೆ 250 ದಶಲಕ್ಷ ಡಾಲರ್ ಒದಗಿಸುವುದಾಗಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಘೋಷಿಸಿದ್ದಾರೆ. ಕೀನ್ಯಾದ ಅಧ್ಯಕ್ಷ ವಿಲಿಯಂ ಸಮೊಯಿ ರುಟೊ ಅವರ ಜೊತೆ ಚರ್ಚೆ ನಡೆಸಿದ ನಂತರ ಪ್ರಧಾನಿ ಈ ಘೋಷಣೆ ಮಾಡಿದ್ದಾರೆ.

ಸೋಮವಾರ ರುಟೊ ಅವರು ಮೂರು ದಿನಗಳ ಭೇಟಿಗಾಗಿ ಭಾರತಕ್ಕೆ ಆಗಮಿಸಿದ್ದಾರೆ. ಈ ಸಂದರ್ಭದಲ್ಲಿ ಕೀನ್ಯಾದ ಕೃಷಿ ವಲಯದ ಆಧುನೀಕರಣಕ್ಕಾಗಿ 250 ದಶಲಕ್ಷ ಡಾಲರ್‌ಗಳ ಸಾಲ ನೆರವು ಘೋಷಿಸಲಾಗಿದೆ.

## ಕರ್ಣಿ ಸೇನಾ ಅಧ್ಯಕ್ಷ ಸಿಂಗ್ ಹತ್ಯೆ

ಜೈಪುರ, ಡಿ. 5 – ರಾಜಸ್ಥಾನದ ಜೈಪುರದಲ್ಲಿ ಶ್ರೀ ರಾಷ್ಟ್ರೀಯ ರಜಪೂತ್ ಕರ್ಣಿ ಸೇನಾದ ಅಧ್ಯಕ್ಷ ಸುಖದೇವ್ ಸಿಂಗ್ ಗೊಗಮೆಡಿ ಅವರನ್ನು ಮೂವರು ವ್ಯಕ್ತಿಗಳು ಮನೆಯಲ್ಲೇ ಗುಂಡಿಟ್ಟು ಹತ್ಯೆಗೈದಿದ್ದಾರೆ.

ಗೊಗಮೆಡಿ ಭೇಟಿ ನೆಪದಲ್ಲಿ ಹಂತಕರು ಅವರ ಮನೆಗೆ ತೆರಳಿದ್ದರು. ನಂತರ ಅವರು ಗುಂಡು ಹಾರಿಸಿ ಹತ್ಯೆ ಮಾಡಿದ್ದಾರೆ. ಗೊಗಮೆಡಿ ಅವರ ಭದ್ರತಾ ಸಿಬ್ಬಂದಿ ಹಂತಕರ ಮೇಲೂ ಗುಂಡು ಹಾರಿಸಿ ಗಾಯಗೊಳಿಸಿದ್ದಾರೆ.

ಭದ್ರತಾ ಸಿಬ್ಬಂದಿ ನಡೆಸಿದ ಮರು ದಾಳಿಯಲ್ಲಿ ಹಂತಕರ ಗುಂಪಿನಲ್ಲಿದ್ದ ನವೀನ್ ಶೆಖಾವತ್ ಎಂಬಾತನಿಗೆ ಗುಂಡು ತಗುಲಿ ಸಾವನ್ನಪ್ಪಿದ್ದಾನೆ. ರೋಹಿತ್ ಗೋದರ ಗ್ಯಾಂಗ್ ಈ ದಾಳಿಯ ಹೊಣೆ ಹೊತ್ತುಕೊಂಡಿದೆ. ಹಂತಕರ ಪತ್ತೆಗಾಗಿ ಪೊಲೀಸರು ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

## ವಿಡಿಯೋ ಕಾನ್ಫರೆನ್ಸ್‌ಗೆ ತಡೆ

**(1ನೇ ಪುಟದಿಂದ)** ತೆಗೆದುಕೊಂಡಿರುವುದಾಗಿ ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಿ. ವರಾಳೆ ತಿಳಿಸಿದ್ದಾರೆ. ಸೋಮವಾರ ಕೆಲ ವ್ಯಕ್ತಿಗಳು ವಿಡಿಯೋ ಕಾನ್ಫರೆನ್ಸ್ ಜಾಲವನ್ನು ಹ್ಯಾಕ್ ಮಾಡಿ ಕುಚೇಷ್ಟೆಯ ವಿಡಿಯೋಗಳನ್ನು ಹಾಕಿದ್ದರು.

## 25 ಸಾವಿರ ಸ್ಮಾರಕಗಳ ರಕ್ಷಣೆ

**(1ನೇ ಪುಟದಿಂದ)** ಇಲಾಖೆಗೆ ಸರ್ಕಾರದಿಂದ ರೂ.339.54 ಕೋಟಿ ಮೀಸಲಿರಿಸಲಾಗಿದೆ. ಈ ಪೈಕಿ ರೂ.90 ಕೋಟಿಯನ್ನು ಬಂಡವಾಳ ವೆಚ್ಚಗಳ ಲೆಕ್ಕ ಶೀರ್ಷಿಕೆಗಳಡಿ ಈಗಾಗಲೇ ಒದಗಿಸಲಾಗಿದೆ ಎಂದರು.

# ಹರಿಹರದಲ್ಲಿ 'ಶ್ರೀಶೈಲ ಉತ್ಸವ'



ಹರಿಹರ, ಡಿ.5- ಶ್ರೀಶೈಲ ಜಗದ್ಗುರುಗಳವರ ಜನ್ಮ ದಿನ ಮತ್ತು ಕನ್ನಡ ರಾಜ್ಯೋತ್ಸವದ ಅಂಗವಾಗಿ ನಗರದ ಶ್ರೀಶೈಲ ಹೈಟೆಕ್ ಪಿ.ಯು ಕಾಲೇಜಿನಲ್ಲಿ ನಡೆದ 'ಶ್ರೀಶೈಲ ಉತ್ಸವ-2023' ಜಿಲ್ಲಾ ಮಟ್ಟದ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ ಸಮಾರೋಪ ಸಮಾರಂಭವನ್ನು ಶಾಸಕ ಬಿ.ಪಿ.ಹರೀಶ್ ಅವರು ಉದ್ಘಾಟಿಸಿದರು.

ಜೀ ಟಿವಿಯ ಡಿಕೆಡಿ ಕಾರ್ಯಕ್ರಮದ ಡ್ಯಾನ್ಸ್ ಮಾಸ್ಟರ್ ರುದ್ರ ಮತ್ತು ಸಂಸ್ಥೆಯ ಕಾರ್ಯದರ್ಶಿ ಪ್ರಶಾಂತ್ ದುಗ್ಗತ್ತಿಮಠ್ ಮಾತನಾಡಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಉಪಾಧ್ಯಕ್ಷ ಡಿ.ಎಂ.ಹಾಲಸ್ವಾಮಿ, ಯುವ ಉದ್ಯಮಿ ಶ್ರೀನಿವಾಸ್ ಶಿವಗಂಗಾ, ಸಿ.ಆರ್.ಪಿ. ತಿಪ್ಪೇಸ್ವಾಮಿ, ಮಂಜುಸ್ವಾಮಿ, ನಿರ್ದೇಶಕರಾದ ಎನ್.ಎಂ.ತಿಪ್ಪೇಸ್ವಾಮಿ, ಕೆ.ಎಂ.ಪರಮೇಶ್ವರಯ್ಯ, ಡಿ.ಜಿ. ಶಿವಾನಂದಪ್ಪ, ಕೃಷ್ಣ ನಾಯಕ್, ಎನ್.ಹೆಚ್.ಪಾಟೀಲ್ ಮಲ್ಲಿಕಾರ್ಜುನ, ನಿ.ಪ್ರಾಚಾರ್ಯರಾದ ಡಾ.ಎಸ್.ಎಚ್.ಪ್ಯಾಟಿ ಮತ್ತಿತರರು ಉಪಸ್ಥಿತರಿದ್ದರು.

## 'ದೇಹ' ಕುರೂಪ, 'ಆತ್ಮ' ಜ್ಯೋತಿ ಸ್ವರೂಪ

**(1ನೇ ಪುಟದಿಂದ)** ಗೀತಾಜಿ ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದರು.

ಸುದೀರ್ಘ ಒಂದು ತಿಂಗಳ ಕಾಲ ಪ್ರತಿದಿನ ಸಂಜೆ 6.30ರಿಂದ 7.30ರವರೆಗೆ 1 ಗಂಟೆ ಸಮಯ ನಡೆಯುವ ಈ ಪ್ರವಚನವನ್ನು ನೇರ ಪ್ರಸಾರ ವೀಕ್ಷಸಲು ಯು ಟ್ಯೂಬ್ ಚಾನಲಾದ ರಾಜಯೋಗ ಟಿವಿ ಕನ್ನಡದಲ್ಲಿ (youtube/rajayogatvkannada) ವೀಕ್ಷಿಸಬಹುದು.

## ಹಿಂದುಳಿದ ಅಭಿವೃದ್ಧಿ ನಿಗಮಗಳಿಂದ ಅರ್ಜಿ ಆಹ್ವಾನದ ಅವಧಿ ವಿಸ್ತರಣೆ

ದಾವಣಗೆರೆ, ಡಿ. 5 - ಡಾ.ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕರ್ನಾಟಕ ಆದಿ ಜಾಂಬವ ಅಭಿವೃದ್ಧಿ ನಿಗಮ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದಿಂದ ವಿವಿಧ ಯೋಜನೆಗಳಿಗೆ ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಸುವ ಅವಧಿಯನ್ನು ಇದೇ ದಿನಾಂಕ 15 ರವರೆಗೆ ವಿಸ್ತರಿಸಲಾಗಿದೆ ಎಂದು ನಿಗಮದ ಜಿಲ್ಲಾ ವ್ಯವಸ್ಥಾಪಕ ಪಿ. ರಮೇಶ್ ತಿಳಿಸಿದ್ದಾರೆ.

# ಚೌಟ್ರಿ ಕಳ್ಳತನ ಪ್ರಕರಣ ಪತ್ತೆ : ಆಭರಣ ವಶ

ದಾವಣಗೆರೆ, ಡಿ.5- ಶಾಮನೂರು ಜಯದೇವಪ್ಪ ಕಲ್ಯಾಣ ಮಂಟಪದಲ್ಲಿ ನಡೆದಿದ್ದ ಕಳ್ಳತನ ಪ್ರಕರಣ ಪತ್ತೆ ಹಚ್ಚಿರುವ ಪೊಲೀಸರು ಕಾನೂನು ಸಂಘರ್ಷಕ್ಕೊಳಗಾದ ಬಾಲಕನನ್ನು ಪತ್ತೆ ಮಾಡಿ ಆತನಿಂದ 1.40 ಲಕ್ಷ ರೂ. ಬೆಲೆಯ 23 ಗ್ರಾಂ ಬಂಗಾರದ ಆಭರಣ ವಶಪಡಿಸಿಕೊಂಡಿದ್ದಾರೆ. ಹೊಳಲ್ಕೆರೆ ತಾಲ್ಲೂಕು ಶಿವಗಂಗಾ ಗ್ರಾಮದ ಶ್ವೇತಾ ಎಂ.ಆರ್. ಅವರು ಮದುವೆಗೆಂದು ನಗರದ ಜಯದೇವಪ್ಪ ಕಲ್ಯಾಣ ಮಂಟಪಕ್ಕೆ ಬಂದು ಕೊಠಡಿಯಲ್ಲಿ ಚಿನ್ನಾಭರಣದ ಬ್ಯಾಗ್ ಇಟ್ಟು ಬೀಗ ಹಾಕಿಕೊಂಡು ಹೋಗಿದ್ದರು. ನಂತರ ನೋಡಲಾಗಿ ಬೀಗ ಒಡೆದು ಬ್ಯಾಗ್‌ನಲ್ಲಿದ್ದ ಚಿನ್ನಾಭರಣಗಳನ್ನು ಕಳವು ಮಾಡಲಾಗಿತ್ತು. ಈ ಕುರಿತು ಅವರು ಕಳೆದ ಜೂ.5ರಂದು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

# ಸುಲಿಗೆ ಮಾಡುತ್ತಿದ್ದವರ ಬಂಧನ 4 ಬೈಕ್‌ಗಳು, 1 ಮೊಬೈಲ್ ವಶಕ್ಕೆ

ದಾವಣಗೆರೆ, ಡಿ.5- ಬೈಪಾಸ್ ಬಳಿಯ ಅಂಡರ್‌ಬ್ರಿಡ್ಜ್ ಬಳಿ ಸುಲಿಗೆ ಮಾಡಿದ್ದ ಪ್ರಕರಣ ಬೇಧಿಸಿರುವ ಪೊಲೀಸರು ಕಾನೂನು ಸಂಘರ್ಷಕ್ಕೊಳಗಾದ ಬಾಲಕ ಸೇರಿದಂತೆ 6 ಜನರನ್ನು ಬಂಧಿಸಿದ್ದಾರೆ.

ದಾವಣಗೆರೆಯ ಅಶ್ವತ್ಥ್ ಪಿ. (20), ಪ್ರಜ್ವಲ್ ಕೆ.ಎಸ್. (19), ಸುಪ್ರೀತ್ (19) ಆಕಾಶ್ ಎನ್. (18) ಅರವಿಂದ್ (19) ಹಾಗೂ ಕಾನೂನು ಸಂಘರ್ಷಕ್ಕೊಳಗಾದ ಬಾಲಕನೊಬ್ಬ ಬಂಧಿತರು. ಅವರಿಂದ 2.90 ಲಕ್ಷ ರೂ. ಬೆಲೆಯ ನಾಲ್ಕು ಬೈಕ್‌ಗಳು, 54 ಸಾವಿರ ರೂ. ಬೆಲೆಯ ಬಂಗಾರದ ಸರ ವಶಪಡಿಸಿಕೊಳ್ಳಲಾಗಿದೆ. ಇವರು ವಿದ್ಯಾನಗರ ಠಾಣೆಯ 2 ಹಾಗೂ ಕೆಟಿಜೆ ನಗರ ಠಾಣೆಯ 1 ಪ್ರಕರಣದಲ್ಲಿ ಭಾಗಿಯಾಗಿದ್ದಾರೆ.

ಕಳೆದ ನ.11ರಂದು ಸುಬ್ರಹ್ಮಣ್ಯ ನಗರದ ವಿನಾಯಕ ರೈಸ್‌ಮಿಲ್‌ಗೆ ಹೋಗುವಾಗ ಎರಡು ಬೈಕ್‌ಗಳಲ್ಲಿ ಬಂದ ಐವರು, ಬೈಕ್ ಅಡ್ಡ ಹಾಕಿ ಮುಖಕ್ಕೆ ಹೊಡೆದು ಹಲ್ಲೆ ಮಾಡಿ ಮೊಬೈಲ್ ಕಿತ್ತುಕೊಂಡು ಹೋಗಿದ್ದರು. ಈ ಕುರಿತು ಚೇತನ್ ದೂರು ದಾಖಲಿಸಿದ್ದರು.

ವಿದ್ಯಾನಗರ ಠಾಣೆ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀಮತಿ ಪ್ರಭಾವತಿ. ಸಿ.ಶೇತಸನದಿ, ಡಿಸಿಐಬಿ ಘಟಕದ ಪೊಲೀಸ್ ಇನ್ಸ್‌ಪೆಕ್ಟರ್ ರುದ್ರಪ್ಪ. ಎಲ್, ವಿದ್ಯಾನಗರ ಪೊಲೀಸ್ ಠಾಣೆಯ ಪಿಎಸ್‌ಐ ವಿಜಯ್.ಎಂ., ಸಿಬ್ಬಂದಿಗಳಾದ ಆನಂದ ಮುಂದಲಮನಿ, ಯೋಗೀಶ್ ನಾಯ್ಕ, ಭೋಜಪ್ಪ ಕಿಚಡಿ, ಮಂಜಪ್ಪ.ಟಿ, ಲಕ್ಷ್ಮಣ.ಆರ್ ಹಾಗೂ ಡಿಸಿಐಬಿ ಘಟಕದ ಸಿಬ್ಬಂದಿಗಳಾದ ಮಜೀದ್, ಅಶೋಕ್, ರಾಘವೇಂದ್ರ, ಬಾಲಾಜಿ, ಸುರೇಶ್, ರಮೇಶ್‌ನಾಯ್ಕ್, ನಟರಾಜ, ಮಾರುತಿ, ಆಂಜನೇಯ, ರಾಘವೇಂದ್ರ, ಶಾಂತರಾಜು ಆರೋಪಿತರ ಪತ್ತೆಯಲ್ಲಿ ಶ್ರಮಿಸಿದ್ದಾರೆ.

# ಕಳ್ಳರ ಬಂಧನ : ಸೈಕಲ್‌ಗಳ ವಶ

ದಾವಣಗೆರೆ, ಡಿ.5- ಸೈಕಲ್ ಕಳ್ಳತನ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಬಂಧಿಸಿರುವ ಪೊಲೀಸರು ಅವರಿಂದ 1.06 ಲಕ್ಷ ರೂ. ಬೆಲೆಯ 5 ಗೇರ್ ಸೈಕಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಭರಮಸಾಗರ ಹೋಬಳಿಯ ದರ್ಶನ್ ಕೆ.ಜಿ. (19), ದಾವಣಗೆರೆಯ ಓಂಕಾರೇಶ್. (18) ಹಾಗೂ ಯಶವಂತ (19) ಬಂಧಿತರು.

ಕಳೆದ ನ.5ರಂದು ಆಂಜನೇಯ ಬಡಾವಣೆಯ ರಾಜೇಶ್ವರಿ ಅವರು ಮನೆ ಮುಂದೆ ನಿಲ್ಲಿಸಿದ್ದ ಸೈಕಲ್ ಕಳ್ಳತನವಾಗಿದ್ದಾಗಿ ವಿದ್ಯಾನಗರ ಠಾಣೆಯಲ್ಲಿ ದೂರು ದಾಖಲಿಸಿದ್ದರು. ದೂರಿನ ತನಿಖೆ ನಡೆಸಿದ ಪೊಲೀಸರು ಆರೋಪಿಗಳನ್ನು ಬಂಧಿಸಿದ್ದಾರೆ.

# ರಾಣೇಬೆನ್ನೂರು ಗ್ರಾಮಾಂತರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ವಿದ್ಯುತ್ ಕೇಂದ್ರಗಳ 220ಕೆವಿ ವಿ.ಕೇಂದ್ರ ರಾಣೇಬೆನ್ನೂರು, 110ಕೆವಿ ಬೇಲೂರು / ಹೀಲದಹಳ್ಳಿ, 110ಕೆವಿ ಅರೇಮಲ್ಲಾಪುರ, 110ಕೆವಿ ತುಮ್ಮಿನಕಟ್ಟೆ, 33ಕೆವಿ ಕುಪ್ಪೇಲೂರು, 33ಕೆವಿ ಮುದೇನೂರು, 33ಕೆವಿ ಚಳಗೇರಿ, 33ಕೆವಿ ಹಲಗೇರಿ ಮತ್ತು 33ಕೆವಿ ಸುಣಕಲ್ ಬಿದರಿ ವಿದ್ಯುತ್ ಕೇಂದ್ರಗಳ ಎಲ್ಲಾ 11ಕೆವಿ ಎನ್.ಜೆ.ವಾಯ್ ಮಾರ್ಗಗಳನ್ನು ಹೊರತುಪಡಿಸಿ, ಎಲ್ಲಾ 11ಕೆವಿ ನೀರಾವರಿ ಮಾರ್ಗಗಳಿಗೆ ಇಂದು 11 ರಿಂದ ಸಂಜೆ 6 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

110 ಕೆವಿ ಹೊಸ ಹೊನ್ನತ್ತಿ ಸ್ಟೇಷನ್‌ನಿಂದ ಹೊರಡುವ ಎಲ್ಲಾ 11 ಕೆವಿ ಮಾರ್ಗಗಳಿಗೆ ಮತ್ತು 33 ಕೆವಿ ಬುಡಪನಹಳ್ಳಿ ಎಲ್.ಐ.ಎಸ್ ಮತ್ತು 33 ಕೆವಿ ಗುಡುಗೂರು-ಮೈದೂರು ಸ್ಟೇಷನ್‌ನಿಂದ ಹೊರಡುವ ಪಂಪಸೆಟ್ ಮಾರ್ಗಗಳಿಗೆ ಇಂದು ಬೆಳಿಗ್ಗೆ 11 ರಿಂದ ಸಂಜೆ 6 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.


## ಪವಿತ್ರ ಉಮ್ರಾ ಯಾತ್ರೆಗೆ ಶುಭಾಶಯಗಳು





ಮಿಲ್ಲತ್ ವಿದ್ಯಾ ಮತ್ತು ಕಲ್ಯಾಣ ಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ

**ಜನಾಬ್ ಸೈಯದ್ ಸೈಫುಲ್ಲಾ ಸಾಹೇಬ್ ಮತ್ತು ಸೈಯದ್ ಖಾಲಿದ್ ಅಹಮ್ಮದ್**

ಜಂಟಿ ಕಾರ್ಯದರ್ಶಿ ಮತ್ತು ಕುಟುಂಬ ವರ್ಗದವರು ಉಮ್ರಾ ಯಾತ್ರೆಗೆ ತೆರಳುತ್ತಿದ್ದು ಅವರಿಗೆ ಶುಭ ಕೋರುವವರು...

**ಮಿಲ್ಲತ್ ವಿದ್ಯಾ ಮತ್ತು ಕಲ್ಯಾಣ ಸಂಸ್ಥೆ**

ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರುಗಳು, ಆಡಳಿತಾಧಿಕಾರಿಗಳು, ಸಂಸ್ಥೆಯ ಪ್ರಾಂಶುಪಾಲರು ಹಾಗೂ ಮುಖ್ಯೋಪಾಧ್ಯಾಯರು ಮತ್ತು ಬೋಧಕ/ಬೋಧಕೇತರ ಸಿಬ್ಬಂದಿ ವರ್ಗದವರು


## ಘನ ಪ್ರಿನ್ಸಿಪಾಲ್ ಡಿಸ್ಟ್ರಿಕ್ಟ್ ಅಂಡ್ ಸೆಷನ್ಸ್ ಜಡ್ಜ್‌ರವರ ನ್ಯಾಯಾಲಯ

**ದಾವಣಗೆರೆಯವರ ಸಮ್ಮುಖದಲ್ಲಿ ಎ.ಪಿ. 5/2023**

ಅರ್ಜಿದಾರರು : ನ್ಯಾಷನಲ್ ಹೈ ವೇಸ್ ಅಥಾರಿಟಿ ಆಫ್ ಇಂಡಿಯಾ ವಿರುದ್ಧ

ಪ್ರತಿವಾದಿಗಳು : ಆರ್ಬಿಟ್ರೇಟರ್ ಮತ್ತು ಜಿಲ್ಲಾಧಿಕಾರಿಗಳು ಮತ್ತು ಇತರೆಯವರು

### ಪ್ರಕಟಣೆ


**ಸಿಪಿಸಿ ಆರ್ಡರ್ 5, ರೂಲ್ 20(1-A) ರೆಡ್ ವಿತ್ ಸೆಕ್ಷನ್ 151 ಪ್ರಕಾರ-ಮಧ್ಯಂತರ ಅರ್ಜಿ ಆದೇಶಾನುಸಾರ ಪ್ರಕರಣದ ರೆಸ್ಪಾಂಡೆಂಟ್ ನಂ. 2 ರವರಿಗೆ ನೀಡುತ್ತಿರುವ ನೋಟೀಸ್**

ಮೇಲ್ಕಂಡ ಘನ ನ್ಯಾಯಾಲಯದ ಪ್ರಕರಣದಲ್ಲಿನ ರೆಸ್ಪಾಂಡೆಂಟ್ ನಂ. 2 ರವರಾದ ಶ್ರೀಮತಿ ರತ್ನಮ್ಮ ಕೋಂ. ಮಹಂತೇಶ್, ವಯಸ್ಕರು, ಡೋರ್ ನಂ. 624, ಹಳೆಯ ತಾಲ್ಲೂಕ್ ಕಛೇರಿ ರಸ್ತೆ, ಹೊರಕೆರೆ, ಜಗಳೂರು ಟೌನ್ ವಾಸಿ, ಇವರಿಗೆ ಈ ಮೂಲಕ ತಿಳಿಸುವುದೇನೆಂದರೆ, ಸದರಿ ಪ್ರಕರಣದ-ಸದರಿ ರೆಸ್‌ಪಾಂಡೆಂಟ್ ರವರು, ಜಗಳೂರು ತಾಲ್ಲೂಕ್, ಕಲ್ಲೇದೇವರಪುರ ಗ್ರಾಮದ ಖಾತೆ ನಂ. 94ರಲ್ಲಿ 36.43 ಚದರ ಮೀಟರ್ಸ್, ಭೂ ಪ್ರದೇಶವನ್ನು ಪ್ರಕರಣದ ಅರ್ಜಿದಾರರು ಕೇಂದ್ರ ಸರ್ಕಾರದ ಪರವಾಗಿ ನ್ಯಾಶನಲ್ ಹೈ ವೇಸ್ ಆಕ್ಟ್ 1956 ಸೆಕ್ಷನ್ 3(ಡಿ) ಪ್ರಕಾರ ಭೂ-ಸ್ವಾಧೀನ ಪಡಿಸಿಕೊಂಡಿದ್ದು, ನಂತರ, ಸದರಿ ರೆಸ್‌ಪಾಂಡೆಂಟ್ಸ್‌ರವರುಗಳು, ಸದರಿ ಭೂ-ಸ್ವಾಧೀನದ ಬಗ್ಗೆ ಹೆಚ್ಚಿನ ಪರಿಹಾರ ಕೋರಿ - ಘನ ಆರ್ಬಿಟ್ರೇಟರ್ ಮತ್ತು ಜಿಲ್ಲಾಧಿಕಾರಿಗಳು, ದಾವಣಗೆರೆಯವರಲ್ಲಿ ಕ್ರಮವಾಗಿ-ಕೇಸ್ ನಂ. ಎಲ್.ಎ.ಕ್ಯೂ. ಎ.ಆರ್.ಬಿ.ಸಿ.ಆರ್. 69/2018-19ರ ಪ್ರಕಾರ ಅರ್ಜಿಯನ್ನು ಸಲ್ಲಿಸಿದ್ದು, ಆ ಅರ್ಜಿಯ ಮೇಲೆ ಸದರಿ ಆರ್ಬಿಟ್ರೇಟರ್ ಮತ್ತು ಜಿಲ್ಲಾಧಿಕಾರಿಗಳು, ದಾವಣಗೆರೆಯವರು ತಾ॥ 30.5.2022ರಂದು ಹೊರಡಿಸಿದ ಆದೇಶ/ಅವಾರ್ಡ್ ವಿರುದ್ಧ, ಸದರಿ ಅರ್ಜಿದಾರರು, ಸದರಿ ಘನ ನ್ಯಾಯಾಲಯದ ಸಮ್ಮುಖದಲ್ಲಿ ಸದರಿ ಅಪೀಲ್/ಪ್ರಕರಣವನ್ನು ಸಲ್ಲಿಸಿದ್ದು, ಸದರಿ ತಾವುಗಳು ಸಹ ಪ್ರಕರಣದಲ್ಲಿ ಪಾಲ್ಗೊಳ್ಳುವಂತೆ - ಸದರಿ ಘನ ನ್ಯಾಯಾಲಯವು ಈ ಮೂಲಕ ತಮಗೆ ನಿರ್ದೇಶಿಸುವುದೇನೆಂದರೆ, ತಾರೀಖು : 08.01.2024 ರಂದು ಬೆಳಿಗ್ಗೆ 11.00 ಗಂಟೆಗೆ-ತಾವೇ ಖುದ್ದಾಗಲೀ ಆಗಲ ಅಥವಾ ತಮ್ಮ ಪರ ವಕೀಲರಾಗಲೀ ಹಾಜರಾಗಿ, ಸದರಿ ಪ್ರಕರಣದ ಬಗ್ಗೆ ತಮ್ಮ ತಕರಾರು/ಅಹವಾಲು ಮತ್ತು ಸಾಕ್ಷಿ ಪುರಾವೆಗಳನ್ನು ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ, ಸದರಿ ಘನ ನ್ಯಾಯಾಲಯವು ಸದರಿ ಪ್ರಕರಣದಲ್ಲಿ ತಮ್ಮನ್ನು ಏಕ ಪಕ್ಷೀಯ ಮಾಡಿ ಪ್ರಕರಣವನ್ನು ನಿಮ್ಮ ಗೈರು ಹಾಜರಿಯಲ್ಲಿ ಇತ್ಯರ್ಥಗೊಳಿಸಲಾಗುವುದು ತಿಳಿಯಿರಿ. ಘನ ನ್ಯಾಯಾಲಯದ ಆದೇಶದ ಮೇರೆಗೆ ಈ ಕೆಳಗೆ ನನ್ನ ಸಹಿಯೊಂದಿಗೆ ನ್ಯಾಯಾಲಯದ ಮೊಹರೆನಿಸಿ, ದಿನಾಂಕ :4.12.2023 ರಂದು ನೀಡಿದ ನೋಟಿಸ್.

**ಸಹಿ/- ಎಸ್. ಸಿದ್ದವೀರಪ್ಪ ಬಿ.ಕಾಂ., ಎಲ್.ಎಲ್.ಬಿ., ಅರ್ಜಿದಾರರ ಪರ ವಕೀಲರು, ಪಿ.ಜೆ. ಬಡಾವಣೆ, ದಾವಣಗೆರೆ. 27.11.2023**

**ಘನ ನ್ಯಾಯಾಲಯದ ಅಪ್ಪಣೆ ಮೇರೆಗೆ ಸಹಿ/- ಮುಖ್ಯ ಆಡಳಿತಾಧಿಕಾರಿಗಳು ಪ್ರಿನ್ಸಿಪಾಲ್ ಡಿಸ್ಟ್ರಿಕ್ಟ್ ಅಂಡ್ ಸೆಷನ್ಸ್ ಜಡ್ಜ್‌ರವರ ನ್ಯಾಯಾಲಯ, ದಾವಣಗೆರೆ.**

## ನಗರದ ಶ್ರೀ ಶಿರಡಿ ಸಾಯಿಬಾಬಾ ಮಂದಿರದಲ್ಲಿ ನಾಳೆ ಕಾರ್ತಿಕೋತ್ಸವ



ದಾವಣಗೆರೆ,ಡಿ.5- ನಗರದ ಎಂ.ಸಿ.ಸಿ. ಎ ಬ್ಲಾಕ್‌ನಲ್ಲಿರುವ ಶ್ರೀ ಶಿರಡಿ ಸಾಯಿಬಾಬಾ ಮಂದಿರದಲ್ಲಿ ನಾಡಿದ್ದು ದಿನಾಂಕ 7ರ ಗುರುವಾರ ಸಂಜೆ 6 ಗಂಟೆಗೆ ಕಾರ್ತಿಕೋತ್ಸವ ನಡೆಯಲಿದೆ ಎಂದು ಶ್ರೀ ಸಾಯಿ ಟ್ರಸ್ಟ್ ಕಾರ್ಯದರ್ಶಿ ಎಂ. ಶಿವಪ್ಪ ತಿಳಿಸಿದ್ದಾರೆ.

ಕಾರ್ತಿಕೋತ್ಸವದ ಅಂಗವಾಗಿ ಅಂದು ಬೆಳಿಗ್ಗೆ 6 ಗಂಟೆಗೆ ಕಾಕಡಾರತಿ, ಬೆಳಿಗ್ಗೆ 8ಕ್ಕೆ ಆರತಿ, ಬೆಳಿಗ್ಗೆ 8.30ರಿಂದ ಲಲಿತ ಸಹಸ್ರ ನಾಮಾವಳಿ, ವಿಷ್ಣು ಸಹಸ್ರ ನಾಮಾವಳಿ, ಬೆಳಿಗ್ಗೆ 10.30ರಿಂದ ಸಾಯಿ ಭಜನಾಮೃತ - ಶ್ರೀ ಶಿರಡಿ ಸಾಯಿಬಾಬಾ ಭಜನಾ ಮಂಡಳಿಯಿಂದ ಸಾಯಿ ಭಜನೆ, ಮಧ್ಯಾಹ್ನ 12ಕ್ಕೆ ಆರತಿ, ಪ್ರಸಾದ ಕಾರ್ಯಕ್ರಮ, ಸಂಜೆ 6 ಗಂಟೆಗೆ ದೂಪಾರತಿ, ಪ್ರಸಾದ ವಿನಿಯೋಗ, ದುನಿ ಪೂಜೆ, ರಾತ್ರಿ 9ಕ್ಕೆ ಶೇಜಾರತಿ ಕಾರ್ಯಕ್ರಮಗಳು ಜರುಗಲಿವೆ.

ಶ್ರೀ ಸಾಯಿ ಟ್ರಸ್ಟ್ ಅಧ್ಯಕ್ಷರೂ ಆಗಿರುವ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಕಾರ್ಯಾಧ್ಯಕ್ಷ ಎಸ್.ಎಸ್. ಗಣೇಶ್, ಉಪಾಧ್ಯಕ್ಷ ಅಥಣಿ ವೀರಣ್ಣ ಸೇರಿದಂತೆ ಅನೇಕ ಗಣ್ಯರು ಈ ಕಾರ್ಯಕ್ರಮಗಳಲ್ಲಿ ಉಪಸ್ಥಿತರಿರುವರು.

# ಹದಿಹರೆಯದ ವಯಸ್ಸಿನ ಮಕ್ಕಳಿಗೆ ಜಾಗೃತಿ ಮೂಡಿಸಲು ಸೂಚನೆ

ದಾವಣಗೆರೆ, ಡಿ.5- ಕಾಣೆಯಾದ ಪ್ರಕರಣಗಳಲ್ಲಿ ಹದಿಹರೆಯದ ವಯಸ್ಸಿನ ಮಕ್ಕಳೇ ಹೆಚ್ಚಾಗಿದ್ದು, ಈ ಹಂತದಲ್ಲಿ ಮಕ್ಕಳಿಗೆ ಅಗತ್ಯವಾದ ಮಾಹಿತಿ ಹಾಗೂ ಜಾಗೃತಿ ಮೂಡಿಸುವ ಕೆಲಸವನ್ನು ಸಖಿ-ಒನ್ ಸ್ಟಾಪ್ ಸೆಂಟರ್‌ಗಳ ಕೌನ್ಸಿಲರ್‌ಗಳು ಮತ್ತು ಶಾಲಾ ಶಿಕ್ಷಕರು ಮಾಡಬೇಕು ಎಂದು ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ಅಧಿಕಾರಿಗಳಿಗೆ ತಿಳಿಸಿದರು.

ಮಂಗಳವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜರುಗಿದ ಸಖಿ-ಒನ್ ಸ್ಟಾಪ್ ಸೆಂಟರ್‌ನ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಶಿಕ್ಷಕರು ವಿದ್ಯಾರ್ಥಿಗಳೊಂದಿಗೆ ಭಾವನಾತ್ಮಕವಾದ ಒಡನಾಟ ಹೊಂದುವುದು ಅತ್ಯವಶ್ಯಕ. ಶಾಲೆಗಳಲ್ಲಿ ಶಿಕ್ಷಕರು ಪ್ರಮುಖವಾಗಿ 8, 9 ಮತ್ತು 10ನೇ ತರಗತಿಯ ಮಕ್ಕಳ ಶೈಕ್ಷಣಿಕ ಹಾಗೂ ಸಾಮಾಜಿಕ ಭಾಗವಹಿಸುವಿಕೆಯನ್ನು ಗಮನಿಸಬೇಕು. ಯಾವುದೇ ರೀತಿಯ ಅನುಮಾನ ಬಂದಲ್ಲಿ ಅವರನ್ನು ಸಂದರ್ಶನಕ್ಕೆ ಒಳಪಡಿಸಿ ಸಮಸ್ಯೆಯನ್ನು ತಿಳಿದುಕೊಳ್ಳಬೇಕು ಮತ್ತು ಅದನ್ನು ಬಗೆಹರಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಬೇಕು.

ಅತ್ಯಾಚಾರ, ಅಪಹರಣ, ಬಾಲ್ಯವಿವಾಹ, ಸೈಬರ್ ಅಪರಾಧ ಮುಂತಾದ ಪ್ರಕರಣಗಳಿಗೆ ಸಂಬಂಧಿಸಿದಂತೆ ಹದಿಹರೆಯದವರಲ್ಲಿ ಜಾಗೃತಿ ಮೂಡಿಸುವುದು ಅತ್ಯಂತ ಅವಶ್ಯಕವಾಗಿದೆ ಎಂದರು.

ಸಖಿ-ಒನ್ ಸ್ಟಾಪ್ ಸೆಂಟರ್‌ಗಳಲ್ಲಿ ಸಂಕಷ್ಟದಲ್ಲಿರುವ ಮಹಿಳೆಯರಿಗೆ ವೈದ್ಯಕೀಯ, ಕಾನೂನು, ಮಾನಸಿಕ, ಸಾಮಾಜಿಕ ಬೆಂಬಲ ಮತ್ತು ತಾತ್ಕಾಲಿಕ ಆಶ್ರಯ ಸೇವೆಗಳನ್ನು ಒದಗಿಸಬೇಕು. ಕೌಟುಂಬಿಕ ದೌರ್ಜನ್ಯಕ್ಕೆ, ಶೋಷಣೆಗೆ ಒಳಗಾದ ಮಹಿಳೆಯರು ಬಂದಾಗ ತಕ್ಷಣವೇ ಎಫ್.ಐ.ಆರ್ ದಾಖಲಿಸದೇ ಮೊದಲನೆಯದಾಗಿ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಸಂತ್ರಸ್ಥೆ ಹಾಗೂ ಅವರ ಕುಟುಂಬದವರೊಂದಿಗೂ ಆಪ್ತ ಸಮಾಲೋಚನೆ ನಡೆಸುವ ಮೂಲಕ ಸಮಸ್ಯೆಗೆ ಪರಿಹಾರವನ್ನು ಒದಗಿಸುವ ಕೆಲಸ ಮಾಡಬೇಕು. ಇಲ್ಲವಾದಲ್ಲಿ ಇದು ಸಾಮಾಜಿಕ ಸಮಸ್ಯೆಯನ್ನು ಉಂಟುಮಾಡುತ್ತದೆ ಎಂದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪ ನಿರ್ದೇಶಕಿ ವಾಸಂತಿ ಉಪ್ಪಾರ್ ಮಾತನಾಡಿ, ಜಿಲ್ಲೆಯಲ್ಲಿ ಏಪ್ರಿಲ್‌ನಿಂದ ಇಲ್ಲಿಯವರೆಗೆ ಮಕ್ಕಳಿಗೆ ಸಂಬಂಧಿಸಿದಂತೆ 61 ಪ್ರಕರಣಗಳು ಹಾಗೂ ಕೌಟುಂಬಿಕ ಸಮಸ್ಯೆಗಳಿಗೆ ಸಂಬಂಧಿಸಿದಂತೆ 46 ಪ್ರಕರಣಗಳು ಸೇರಿದಂತೆ ಒಟ್ಟು 107 ಪ್ರಕರಣಗಳು ದಾಖಲಾಗಿವೆ ಎಂಬ ಮಾಹಿತಿ ನೀಡಿದರು.

ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಕೃಷ್ಣನಾಯ್ಕ್, ಮಹಿಳಾ ಪೊಲೀಸ್ ಠಾಣೆಯ ಪೊಲೀಸ್ ಅಧಿಕಾರಿ ನೂರ್ ಅಹಮದ್, ಜಿಲ್ಲಾ ಸರ್ಜನ್ ಡಾ. ಎನ್.ಬಿ. ನಾಗೇಂದ್ರಪ್ಪ, ಮಕ್ಕಳ ರಕ್ಷಣಾ ಘಟಕಾಧಿಕಾರಿ ರಾಜಕುಮಾರ್, ಶುಭೋದಯ ಸೇವಾ ಸಂಸ್ಥೆ ಕಾರ್ಯದರ್ಶಿ ಹೆಚ್. ಬಿ. ಕುಮಾರ್ ಉಪಸ್ಥಿತರಿದ್ದರು.



ಸಖಿ-ಒನ್ ಸ್ಟಾಪ್ ಸೆಂಟರ್‌ನ ಪ್ರಗತಿ ಪರಿಶೀಲನೆ ಸಭೆ

**ಕಾಣೆಯಾದ ಪ್ರಕರಣಗಳಲ್ಲಿ ಹದಿಹರೆಯದ ವಯಸ್ಸಿನ ಮಕ್ಕಳೇ ಹೆಚ್ಚಾಗಿದ್ದು, ಈ ಹಂತದಲ್ಲಿ ಮಕ್ಕಳಿಗೆ ಅಗತ್ಯವಾದ ಮಾಹಿತಿ ಹಾಗೂ ಜಾಗೃತಿ ಮೂಡಿಸುವ ಕೆಲಸವನ್ನು ಸಖಿ-ಒನ್ ಸ್ಟಾಪ್ ಸೆಂಟರ್‌ಗಳ ಕೌನ್ಸಿಲರ್‌ಗಳು ಮತ್ತು ಶಾಲಾ ಶಿಕ್ಷಕರು ಮಾಡಬೇಕು.**

**- ಡಾ. ಎಂ.ವಿ. ವೆಂಕಟೇಶ್, ಜಿಲ್ಲಾಧಿಕಾರಿ**

## ಸನಾತನ ಧರ್ಮದ ವಿರುದ್ಧ ದ್ವೇಷ ಭಾಷಣ

### ಪ್ರಿಯಾಂಕ್ ಖರ್ಗೆ, ಉದಯನಿಧಿ ಸ್ಟಾಲಿನ್ ವಿರುದ್ಧ ಎಫ್‌ಐಆರ್‌ಗೆ ಒತ್ತಾಯ

ನವದೆಹಲಿ, ಡಿ. 6 – ಸನಾತನ ಧರ್ಮದ ಕುರಿತು ದ್ವೇಷ ಭಾಷಣ ಮಾಡಿರುವ ತಮಿಳುನಾಡಿನ ಸಚಿವ ಉದಯನಿಧಿ ಸ್ಟಾಲಿನ್ ಹಾಗೂ ಈ ಹೇಳಿಕೆಯನ್ನು ಬೆಂಬಲಿಸಿರುವ ಕರ್ನಾಟಕದ ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಎಫ್.ಐ.ಆರ್. ದಾಖಲಿಸುವಂತೆ ರಾಜ್ಯಸಭೆಯಲ್ಲಿ ಒತ್ತಾಯಿಸಲಾಗಿದೆ.

ಶೂನ್ಯ ವೇಳೆಯಲ್ಲಿ ಬಿಜೆಪಿ ಸಂಸದ ಜಿ.ವಿ.ಎಲ್. ನರಸಿಂಹ ರಾವ್ ಮಾತನಾಡಿ, ಆಕ್ಷೇಪಾರ್ಹ ಹೇಳಿಕೆ ನೀಡಿರುವ ಸಚಿವರನ್ನು ವಜಾಗೊಳಿಸಬೇಕು ಎಂದೂ ಒತ್ತಾಯಿಸಿದ್ದಾರೆ.

ಸನಾತನ ಧರ್ಮ ಹಾಗೂ ಹಿಂದೂ ಧರ್ಮದ ವಿರುದ್ಧ ತಮಿಳುನಾಡು ಸಚಿವರೊಬ್ಬರು ದ್ವೇಷ ಭಾಷಣ ಮಾಡಿದ್ದಾರೆ. ಸನಾತನ ಧರ್ಮ ನಿರ್ಮೂಲನೆಯೇ ಐ.ಎನ್.ಡಿ.ಐ.ಎ. ಒಕ್ಕೂಟದ ಉದ್ದೇಶ ಎಂದು ಇನ್ನೊಬ್ಬ ಸಚಿವರು ಹೇಳಿದ್ದಾರೆ. ಕಾಂಗ್ರೆಸ್ ಅಧ್ಯಕ್ಷ ಹಾಗೂ ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕರ ಪುತ್ರರಾಗಿರುವ ಕರ್ನಾಟಕದ ಸಚಿವ ಈ ಹೇಳಿಕೆಯನ್ನು ಬೆಂಬಲಿಸಿದ್ದಾರೆ ಎಂದು ರಾವ್ ತಿಳಿಸಿದರು.

ಇದು ಐ.ಎನ್.ಡಿ.ಐ.ಎ. ಒಕ್ಕೂಟದ ಅಜೆಂಡಾ. ಈ ರೀತಿಯ ಹೇಳಿಕೆ ನೀಡುವುದು ದ್ವೇಷ ಭಾಷಣ. ತಮಿಳುನಾಡು ಸರ್ಕಾರ ಈ ಬಗ್ಗೆ ಎಫ್.ಐ.ಆರ್. ದಾಖಲಿಸಬೇಕು ಎಂದವರು ಒತ್ತಾಯಿಸಿದ್ದಾರೆ.

## ಚೀನಾದಲ್ಲಿ ಆರ್ಥಿಕ ಸಮಸ್ಯೆ ಉಲ್ಬಣ

**85 ಲಕ್ಷ ಜನರು ಸಾಲ ಬಾಕಿಯಿಂದ ಕಪ್ಪು ಪಟ್ಟಿಗೆ**


ನವದೆಹಲಿ, ಡಿ. 5 – ಚೀನಾದಲ್ಲಿ ಸಾಲ ಮರು ಪಾವತಿಯಾಗದ ಕಾರಣಕ್ಕೆ 85 ಲಕ್ಷ ಸಾಲಗಾರರನ್ನು ಕಪ್ಪು ಪಟ್ಟಿಗೆ ಸೇರಿಸಲಾಗಿದೆ ಎಂದು ಫೈನಾನ್ಷಿಯಲ್ ಟೈಮ್ಸ್ ವರದಿ ಮಾಡಿದೆ.

ಈ ಸಾಲಗಾರರಲ್ಲಿ ಬಹುತೇಕರು 18 ರಿಂದ 59 ವರ್ಷ ವಯಸ್ಸಿನವರು. ವಿಮಾನದ ಟಿಕೆಟ್ ಖರೀದಿ, ಸರ್ಕಾರಿ ನೌಕರಿ, ಮೊಬೈಲ್ ಪಾವತಿ ಸೇರಿದಂತೆ ಹಲವು ವೇದಿಕೆಗಳಿಂದ ಅವರನ್ನು ನಿಷೇಧಿಸಲಾಗಿದೆ.

2020ರಲ್ಲಿ ಕೊರೊನಾ ಆರಂಭವಾದ ನಂತರ ಸಾಲ ಬಾಕಿ ಹೊಂದಿರುವವರ ಪ್ರಮಾಣ ಶೇ.50ರಷ್ಟು ಹೆಚ್ಚಾಗಿದೆ. ಅದಕ್ಕೂ ಮುಂಚೆ ಸಾಲ ಬಾಕಿದಾರರ ಸಂಖ್ಯೆ 57 ಲಕ್ಷದಷ್ಟಿತ್ತು. ಕ್ರೆಡಿಟ್ ಕಾರ್ಡ್ ಕಂಪನಿಗಳು ಹಲವು ಕೆಟ್ಟ ಸಾಲಗಳ ಬಗ್ಗೆ ವರದಿ ನೀಡಿವೆ. ಚೀನಾ ರಿಯಲ್ ಎಸ್ಟೇಟ್ ಬಿಕ್ಕಟ್ಟು ಎದುರಿಸುತ್ತಿದೆ. ಈ ನಡುವೆ ವೇತನಗಳ ಹೆಚ್ಚಳ ಸ್ಥಗಿತಗೊಂಡಿದೆ ಹಾಗೂ ನಿರುದ್ಯೋಗವೂ ಹೆಚ್ಚಾಗಿದೆ.

## ಐ.ಎನ್.ಡಿ.ಐ.ಎ. ಸಭೆ ಮುಂದೂಡಿಕೆ

ನವದೆಹಲಿ, ಡಿ. 5 – ಪ್ರತಿಪಕ್ಷಗಳದ ಒಕ್ಕೂಟವಾದ ಐ.ಎನ್.ಡಿ.ಐ.ಎ. ಸಭೆಯನ್ನು ಡಿಸೆಂಬರ್ ಮೂರನೇ ವಾರಕ್ಕೆ ಮುಂದೂಡಲಾಗಿದೆ. ಮೈತ್ರಿಕೂಟದ ಹಲವರು ಸಭೆಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಗುವುದಿಲ್ಲ ಎಂದು ತಿಳಿಸಿದ ನಂತರ ಈ ಕ್ರಮ ತೆಗೆದುಕೊಳ್ಳಲಾಗಿದೆ. ಮಂಗಳವಾರ ಸಂಜೆ 6 ಗಂಟೆಗೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಿವಾಸದಲ್ಲಿ ಸಭೆ ನಡೆಸಲು ಈ ಹಿಂದೆ ನಿರ್ಧರಿಸಲಾಗಿತ್ತು.




## ಕಲಾಕುಂಚದ ಎಂಸಿಸಿ ಬಡಾವಣೆ ಶಾಖೆಯ ಅಧ್ಯಕ್ಷರಾಗಿ ಪ್ರಭಾ ರವೀಂದ್ರ ಪುನರಾಯ್ಕೆ



ದಾವಣಗೆರೆ, ಡಿ.5- ನಗರದ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಎಂ.ಸಿ.ಸಿ. ಬಡಾವಣೆ ಶಾಖೆಯ ಅಧ್ಯಕ್ಷರಾಗಿ ಶ್ರೀಮತಿ ಪ್ರಭಾ ರವೀಂದ್ರ ಅವಿರೋಧವಾಗಿ ಪುನರಾಯ್ಕೆ ಯಾಗಿದ್ದಾರೆ ಎಂದು ಕಲಾಕುಂಚ ಮಹಿಳಾ ವಿಭಾಗದ ಶ್ರೀಮತಿ ಜ್ಯೋತಿ ಗಣೇಶ್ ಶೆಣೈ ತಿಳಿಸಿದ್ದಾರೆ.

ಎಂ.ಸಿ.ಸಿ. 'ಎ' ಬ್ಲಾಕ್ ಶ್ರೇಯಸ್ ಸಭಾಂಗಣದಲ್ಲಿ ಇತ್ತೀಚಿಗೆ ಸೇರಿದ್ದ ಸರ್ವ ಸದಸ್ಯರ ಮಹಾಸಭೆಯಲ್ಲಿ 2023-25ನೇ ಸಾಲಿನ ಪದಾಧಿಕಾರಿಗಳ ಆಯ್ಕೆ ನಡೆಯಿತು.


ಗೌರವ ಅಧ್ಯಕ್ಷರಾಗಿ ಶ್ರೀಮತಿ ಶ್ರೀಮತಿ ಚಂದ್ರಶೇಖರ ಅಡಿಗ, ಪ್ರಧಾನ ಕಾರ್ಯದರ್ಶಿಯಾಗಿ ಮಮತ ಕೊಟ್ರೇಶ್, ಖಜಾಂಚಿಯಾಗಿ ಶ್ರೀಮತಿ ಗೀತಾ ಬದರಿನಾಥ್, ಸಂಘಟನಾ ಕಾರ್ಯದರ್ಶಿಯಾಗಿ ಶ್ರೀಮತಿ ಶೈಲಾ ವಿನೋದ ದೇವರಾಜ್, ಸಂಚಾಲಕರಾಗಿ ಶ್ರೀಮತಿ ಗಂಗಾಂಬಿಕಾ ರಾಜೇಶ್ ಆಯ್ಕೆಯಾಗಿದ್ದಾರೆ.

ಸಂಸ್ಥೆಯ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ಚಂದ್ರಶೇಖರ್ ಅಡಿಗ ಪ್ರಾರ್ಥಿಸಿದರು. ಶ್ರೀಮತಿ ಶೈಲಾ ವಿನೋದ ದೇವರಾಜ್ ಸ್ವಾಗತಿಸಿದರು. ಶ್ರೀಮತಿ ಗಂಗಾಂಬಿಕಾ ರಾಜೇಶ್ ವಂದಿಸಿದರು.

## ರಾಜ್ಯದಲ್ಲಿ ಸೈಬರ್ ಪ್ರಕರಣಗಳಲ್ಲಿ ಶೇ.50ರ ಏರಿಕೆ

ಬೆಂಗಳೂರು, ಡಿ. 5 – ಕರ್ನಾಟಕದಲ್ಲಿ 2022ರಲ್ಲಿ ಸೈಬರ್ ಅಪರಾಧಗಳ ಪ್ರಮಾಣ ಶೇ.50ರಷ್ಟು ಹೆಚ್ಚಾಗಿದೆ. ಈ ಬಗ್ಗೆ ಪೊಲೀಸರು 12,556 ಎಫ್.ಐ.ಆರ್.ಗಳನ್ನು ದಾಖಲಿಸಿದ್ದಾರೆ. ಕಳೆದ ವರ್ಷ 8,136 ಎಫ್.ಐ.ಆರ್.ಗಳನ್ನು ದಾಖಲಿಸಲಾಗಿತ್ತು.

ರಾಷ್ಟ್ರೀಯ ಅಪರಾಧಗಳ ದಾಖಲೆ ದಳ (ಎನ್.ಸಿ.ಆರ್.ಬಿ.) ದ ಇತ್ತೀಚಿನ ವರದಿಯ ಪ್ರಕಾರ, 28 ರಾಜ್ಯಗಳ ಪೈಕಿ ತೆಲಂಗಾಣದಲ್ಲಿ ಅತಿ ಹೆಚ್ಚಿನ 15,297 ಸೈಬರ್ ಅಪರಾಧ ಪ್ರಕರಣಗಳು ದಾಖಲಾಗಿವೆ. ಉತ್ತರ ಪ್ರದೇಶದಲ್ಲಿ 10,117 ಪ್ರಕರಣಗಳು ದಾಖಲಾಗಿವೆ.




## ಶ್ರೇಯಾಂಕವನ್ನು ಋಣಾತ್ಮಕಕ್ಕೆ ಇಳಿಸಿದ ಮೂಡೀಸ್

ನವದೆಹಲಿ, ಡಿ. 5 - ಚೀನಾದಲ್ಲಿ ಆರ್ಥಿಕ ಪ್ರಗತಿ ಮಂದವಾಗುವ ಅಪಾಯ ಇದೆ ಹಾಗೂ ರಿಯಲ್ ಎಸ್ಟೇಟ್ ವಲಯದಲ್ಲಿ ಬಿಕ್ಕಟ್ಟಿದೆ ಎಂದಿರುವ ಸಾಲ ಶ್ರೇಯಾಂಕ ಸಂಸ್ಥೆಯಾದ ಮೂಡೀಸ್, ಚೀನಾದ ಸಾವರಿನ್ ಬಾಂಡ್‌ಗಳನ್ನು ಋಣಾತ್ಮಕ ಮಟ್ಟಕ್ಕೆ ಇಳಿಸಿದೆ. 2017ರ ನಂತರ ಇದೇ ಮೊದಲ ಬಾರಿಗೆ ಚೀನಾದ ಶ್ರೇಯಾಂಕವನ್ನು ಮೂಡೀಸ್ ತಳಮಟ್ಟಕ್ಕೆ ಇಳಿಸಿದೆ.

ಸ್ಥಳೀಯ ಹಾಗೂ ಪ್ರಾಂತೀಯ ಸರ್ಕಾರಗಳು ಮತ್ತು ಸರ್ಕಾರಿ ಸ್ವಾಮ್ಯದ ಉದ್ಯಮಗಳು ಹಣಕಾಸು ಸಮಸ್ಯೆಗಳನ್ನು ಎದುರಿಸುತ್ತಿರುವ ಬೆನ್ನಲ್ಲೇ ಈ ಬೆಳವಣಿಗೆಯಾಗಿದೆ.

2020ರಲ್ಲಿ ಚೀನಾದ ಹತ್ತಾರು ಡೆವಲಪರ್‌ಗಳು ಭಾರೀ ಪ್ರಮಾಣದ ಸಾಲ ಪಡೆದಿದ್ದರು. ನಂತರದಲ್ಲಿ ಆರ್ಥಿಕತೆ ಮಂದವಾಗಿದ್ದು ಸಮಸ್ಯೆ ಉಲ್ಬಣಿಸುವಂತೆ ಮಾಡಿದೆ. ಸ್ಥಳೀಯ ಸರ್ಕಾರಗಳು ಸಮಸ್ಯೆ ಎದುರಿಸುತ್ತಿವೆ ಹಾಗೂ ಕೆಲ ಸಾಲಗಾರರು ಬಾಕಿ ಹೊಂದಿದ್ದಾರೆ. ಇದು ಆರ್ಥಿಕತೆಯನ್ನು ಮತ್ತಷ್ಟು ತಳಮಟ್ಟಕ್ಕೆ ಎಳೆದಿದೆ. ಬ್ಯಾಂಕುಗಳು ಹಾಗೂ ಸ್ಥಳೀಯ ಸರ್ಕಾರಗಳಿಗೆ ಈಗ ಸರ್ಕಾರದ ನೆರವಿನ ಅಗತ್ಯವಿದೆ. ಇದು ಚೀನಾದ ವಿತ್ತೀಯ, ಆರ್ಥಿಕ ಹಾಗೂ ಸಾಂಸ್ಥಿಕ ಬಲದ ಮೇಲೆ ಪರಿಣಾಮ ಬೀರುತ್ತಿದೆ.

